ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

22 ಜೂನ್, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 103 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಓವಲ್ ನ್ಯೂಜಿಲೆಂಡ್ ವಿರುದ್ಧದ 1ಟೆಸ್ಟ್ ಪಂದ್ಯದ 2ನೇ ಇನ್ನಿಂಗ್ಸ್‌ನಲ್ಲಿ 24 ರನ್ ಗಳಿಸುವ ಮೂಲಕ 14,000 ಸಾವಿರ ರನ್ ಕಲೆ ಹಾಕುವ ಮೂಲಕ ದಾಖಲೆ ಬರೆದ ಇಂಗ್ಲೆಂಡ್‌ತಂಡದ ನಾಯಕ ಜೋ ರೂಟ್...

ಆ ಬೆಟ್ಟದ ಮೇಲೆ ಅರಳಿದ ಹೂವೇ ನಮ್ಮ ಪ್ರೀತಿ » 2



ಇಂಗ್ಲೆಂಡ್ ವಿರುದ್ಧದ ಏಕ ದಿನ ಸರಣಿಗೆ ಭಾರತ ತಂಡ 3



ಚೈತನ್ಯಕ್ಕೆ ಯೋಗ ಮದ್ದು : ಮೋದಿ » 4


# ಕಾರ್ಯಕರ್ತರ ಗುರುತಿಸಿ ಅಧಿಕಾರ ಕೊಡಿ

## ಸಿ.ಎಂ.-ಕೆಪಿಸಿಸಿ ಅಧ್ಯಕ್ಷರಿಗೆ ಖರ್ಗೆ ಕಿವಿಮಾತು | ಮೋದಿ ವಿರುದ್ಧವೂ ವಾಗ್ದಾಳಿ

• ಪ್ರಜೋದಯ ವರದಿ

**ಬೆಂಗಳೂರು:** ಇಷ್ಟು ದಿನ ಏನಾಯ್ತೋ ಆಗಿದೆ. ಯಾರಿಗೆ ಏನು ಬೇಕೋ ಅದನ್ನು ಮಾಡಿಕೊಂಡಿದ್ದಾರೆ, ಇನ್ನು ಮುಂದಾದರೂ ನಿಜವಾದ ಕಾರ್ಯಕರ್ತರನ್ನು ಗುರುತಿಸಿ ಅಧಿಕಾರ ಕೊಡಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಲಹೆ ನೀಡಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಪದಗ್ರಹಣ ಸಮಾರಂಭದಲ್ಲಿ ಭಾನುವಾರ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಮತ್ತು ಬಿ.ಕೆ.ಹರಿಪ್ರಸಾದ್ ಅವರಿಗೆ ಕಿವಿಮಾತು ಹೇಳಿದರು.

ಇಬ್ಬರು ಒಂದಾಗಿ ಪಕ್ಷ ಸಂಘಟಿಸಬೇಕು. ನಿಮ್ಮಲ್ಲಿ ಎಷ್ಟೇ ವ್ಯತ್ಯಾಸ ಬಂದರೂ ನಾಲ್ಕು ಗೋಡೆಗಳ ಒಳಗೆ ಚರ್ಚೆ ಮಾಡಬೇಕು. ಎಐಸಿಸಿಗೆ ಕೆಟ್ಟ ಹೆಸರು ತರಬಾರದು. ಅಧಿಕಾರ ಹಸ್ತಾಂತರ ಸುಸೂತ್ರವಾಗಿ ನಡೆದಿದೆ. ಅದಕ್ಕಾಗಿ ಸುರ್ಜೇವಾಲಾಗೆ ಅಭಿನಂದನೆ ಸಲ್ಲಿಸುತ್ತೇನೆಂದರು.



ಸಾವಿರಾರು ವರ್ಷಗಳಿಂದ ಆಡಳಿತ ಮಾಡುವವರೇ ಮುಂದುವರಿಯಬೇಕೆಂಬುದು ಬಿಜೆಪಿಯವರ ಉದ್ದೇಶ. ಅದಕ್ಕಾಗಿಯೇ ಆರ್‌ಎಸ್‌ಎಸ್, ಎಬಿವಿಪಿಗೆ ಬೆಂಬಲಿಸುತ್ತಿದ್ದಾರೆ. ಮೋದಿ ಕರ್ನಾಟಕಕ್ಕೆ ಕೊಟ್ಟಿದ್ದು ನಿರುದ್ಯೋಗ, ಬೆಲೆ ಏರಿಕೆ ಎಂದು ವ್ಯಂಗ್ಯವಾಡಿದರು.

**ಮೋದಿಯಿಂದ ದೇಶ ಹಾಳು**

ಆರ್‌ಎಸ್‌ಎಸ್ ಹುಡುಗರು ದೇಶಾದ್ಯಂತ ಇದ್ದಾರೆ. ರಾಜಕೀಯ ಹಿಡಿತ ತಮ್ಮ ಬಳಿಯೇ ಇರಬೇಕೆಂದು ಸಂಘದಲ್ಲಿ ಗುರುತಿಸಿಕೊಂಡವರಿಗೆ ಶಿಕ್ಷಕ, ಉಪನ್ಯಾಸಕ ಹಾಗು ವಿಶ್ವವಿದ್ಯಾಲಯಗಳಲ್ಲಿ ಉನ್ನತ ಸ್ಥಾನಮಾನ ನೀಡಲಾಗುತ್ತಿದೆ. ಪ್ರಧಾನಿ ಮೋದಿ ದೇಶವನ್ನು ಹಾಗು ಟ್ರಂಪ್ ಇಡೀ ಪ್ರಪಂಚ ಹಾಳು ಮಾಡುತ್ತಿದ್ದಾನೆ. ಮೋದಿ-ಟ್ರಂಪ್ ಸೇರಿ ನಮ್ಮ ವಿದೇಶಿ ನೀತಿಯನ್ನೇ ಹಾಳು ಮಾಡಿದರು. ಇಬ್ಬರೂ ಒಂದಾಗಿ ಪ್ರಪಂಚವನ್ನು ಮುಳುಗಿಸುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

**ರಾಮ ಮಂದಿರದಲ್ಲಿ ಲೂಟಿ**

ರಾಮನ ಹೆಸರಲ್ಲಿ ಕೋಟ್ಯಾಂತರ ರೂಪಾಯಿ ಲೂಟಿ ಮಾಡುವವರು ಬಿಜೆಪಿಯವರು. ಹಿಂದೆ ರಾಮ ಮಂದಿರ ನಿರ್ಮಾಣಕ್ಕೆ ರಥ ಯಾತ್ರೆ ಮಾಡಿದವರು ಅಡ್ವಾಣಿ. ಆಗ ಜನರೆಲ್ಲ ಇಟ್ಟಿಗೆ, ದುಡ್ಡು, ಬಂಗಾರ ಕೊಟ್ಟರು. ಅದಕ್ಕೆಲ್ಲ ಲೆಕ್ಕವೇ ಇಲ್ಲ. ಆದರೆ ಈಗ ಇವರ ಶಿಷ್ಯರು ಲೂಟಿ ಮಾಡುತ್ತಿದ್ದಾರೆ. ರಾಮ ಮಂದಿರ ದೇಣಿಗೆಯಲ್ಲಿ ಆಗಿರುವ ಲೂಟಿ ಬಗ್ಗೆ ಎಸ್‌ಐಟಿ ತನಿಖೆ ಆಗಬೇಕು. ರಾಮನ ಹೆಸರಲ್ಲಿ ಲೂಟಿ ಮಾಡುತ್ತಿದ್ದಾರೆ. ಧರ್ಮದ ಹೆಸರಲ್ಲಿ ಲೂಟಿ ಆಗುತ್ತಿದೆ ಎಂದರು.

### ಡಿ.ಕೆ.ಶಿ.ಗೆ ಜೈಕಾರ-ಖರ್ಗೆ ಕೆಂಡಾಮಂಡಲ

ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ಪದಗ್ರಹಣ ಕಾರ್ಯಕ್ರಮದಲ್ಲಿ ಕಾರ್ಯಕರ್ತರು ಡಿ.ಕೆ. ಡಿ.ಕೆ. ಎಂದು ಕೂಗಿದ್ದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಬಾಕಿಯವರೆಲ್ಲಾ ಕಸ ಗುಡಿಸೋಕೆ ಬಂದಿದ್ದೇವಾ, ಯೂಸ್‌ಲೆಸ್ ಫೆಲೋಸ್ ಎಂದು ಕೆಂಡಾಮಂಡಲರಾದರು. ಇಲ್ಲಿ ಕೂಗಿದರೆ ದೇಶ ನಿಮ್ಮ ಕೈಯಲ್ಲಿ ಬಂದಂತೆ ಆಗುತ್ತಾ. ಯೂಸ್‌ಲೆಸ್ ಫೆಲೋಸ್. ಕಾಂಗ್ರೆಸ್ ಪಕ್ಷದ ಸಭೆ ಇದು. ಒಬ್ಬರ ಹೆಸರು ಕೂಗಿದರೆ ಬಾಕಿಯವರು ಕಸಗುಡಿಸಲು ಬಂದಿದ್ದಾರಾ ಎಂದರು.

ಪಕ್ಷಕ್ಕೆ ಶಿಸ್ತು ಬೇಕು. ಯಾರು ಎಷ್ಟೇ ದೊಡ್ಡವರಿರಲಿ ವ್ಯಕ್ತಿ ಪೂಜೆ ನಡೆಯಲ್ಲ. ನನ್ನ 58 ವರ್ಷದ ರಾಜಕೀಯ ಜೀವನದಲ್ಲಿ ಹಲವು ನಾಯಕರು ಬಂದು ಹೋಗಿದ್ದಾರೆ. ಸಾಕಷ್ಟು ಜನರನ್ನು ನೋಡಿದ್ದೇನೆ. ಅನೇಕ ನಾಯಕರು ಕಾಂಗ್ರೆಸ್‌ನಿಂದ ಬೆಳೆದಿದ್ದಾರೆ. ಪಕ್ಷಕ್ಕೆ ಕೊಡುಗೆ ಹೆಚ್ಚು ಇರದಿದ್ದರೂ, ಹಲವರಿಗೆ ಕಾಂಗ್ರೆಸ್ ಶಕ್ತಿ ಕೊಟ್ಟಿದೆ. ನಾವೆಲ್ಲರೂ ಕೂಡಿ ಪಕ್ಷ ಕಟ್ಟೋಣ. ಮಧ್ಯದಲ್ಲಿ ಕೂಗಾಡಿದರೆ ಕ್ರಮ ಜರುಗಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

> **ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಕಾರ್ಯಕರ್ತರ ಕೊಡುಗ ಸಾಕಷ್ಟಿದೆ. ಪ್ರತಿ ಪಂಚಾಯಿತಿ, ವಾರ್ಡ್‌ಗೆ ಹೆಚ್ಚುವರಿಯಾಗಿ 5 ಕಾರ್ಯಕರ್ತರನ್ನು ಗ್ಯಾರಂಟಿ ಸಮಿತಿಗೆ ನೇಮಕ ಮಾಡಲು ತೀರ್ಮಾನಿಸಿದ್ದೇವೆ. ಗ್ಯಾರಂಟಿ ಪರಿಷ್ಕರಣೆಗೆ ಅವರನ್ನು ಬಳಸಿಕೊಳ್ಳಲಾಗುವುದು.**
> **-ಡಿ.ಕೆ.ಶಿವಕುಮಾರ್, ಸಿ.ಎಂ.**

ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಮಾತನಾಡಿ, ಬಿಜೆಪಿ ಅವರಿಗೆ ಅವಕಾಶ ನೀಡಿದರೆ ಗ್ಯಾರಂಟಿ ಯೋಜನೆಗಳನ್ನು ಕಿತ್ತು ಹಾಕುತ್ತಾರೆ. ನಾವು ಗ್ಯಾರಂಟಿ ರಕ್ಷಣೆ ಮಾಡುತ್ತೇವೆ. ವಿರೋಧ ಪಕ್ಷದವರು ಕಾಂಗ್ರೆಸ್ ಮೇಲೆ ಅಷ್ಟೇ ಅಲ್ಲ, ಗ್ಯಾರಂಟಿ ಫಲಾನುಭವಿಗಳ ಮೇಲೆ ಬಿಜೆಪಿ ಹಲ್ಲೆ ಮಾಡುತ್ತಿದೆ. ನಾವು ಒಗ್ಗಟ್ಟಾಗಿ ಕೆಲಸ ಮಾಡಬೇಕಾಗಿದೆ ಎಂದು ಕರೆ ನೀಡಿದರು.

## ಅಡ್ಡ ಮತ: ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕಾಂಗ ಸಭೆ

• ಪ್ರಜೋದಯ ವರದಿ



**ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿನ ಅಡ್ಡ ಮತದಾನದ ಆರೋಪ ಕುರಿತಂತೆ ಅತಿ ಶೀಘ್ರದಲ್ಲೇ ಧರ್ಮಸ್ಥಳದ ಶ್ರೀ ಕ್ಷೇತ್ರದಲ್ಲಿ ನಮ್ಮ ಶಾಸಕಾಂಗ ಪಕ್ಷದ ಸಭೆ ಕರೆಯಲು ನಿರ್ಧರಿಸಿರುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಪಕ್ಷ ನಾಯಕ ಆರ್.ಅಶೋಕ್ ಅವರಿಗೆ ಸಭೆ ಕರೆಯುವ ಸಂಬಂಧ ಮಾತನಾಡುವೆ. ನಾವೆಲ್ಲರೂ ದೇವರನ್ನು ನಂಬುವವರು. ಧರ್ಮಸ್ಥಳದಲ್ಲಿ ಸಭೆ ಕರೆದು ಪಕ್ಷಕ್ಕೆ ದ್ರೋಹ ಮಾಡಿದ ಶಾಸಕರ ಮತ್ತು ಸತ್ಯದ ಬಗ್ಗೆ ಗೊತ್ತಾಗಬೇಕಿದೆ. ಶ್ರೀ ಕ್ಷೇತ್ರದಲ್ಲಿ ತೀರ್ಮಾನ ಆಗಬೇಕೆಂದು ನಿರ್ಧಾರ ಮಾಡಿದ್ದೇನೆಂದು ವಿವರಿಸಿದರು.

ಇಂತಹ ಸಂದರ್ಭದಲ್ಲಿ ಕಾರ್ಯಕರ್ತರಿಗೆ ನೋವಾಗುವುದು ಸಹಜ. ಅಡ್ಡ ಮತದಾನವನ್ನು ನನ್ನ ಮನಸಾಕ್ಷಿ ಒಪ್ಪುತ್ತಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಬರುತ್ತಿರುವ ಟೀಕೆಗಳ ಬಗ್ಗೆ ನಾನು ಕೂಡ ಗಮನಿಸಿದ್ದೇನೆ. ಅದನ್ನೇ ನೆಪ ಮಾಡಿಕೊಂಡು ಪರೋಕ್ಷ ದಾಳಿ ಮಾಡುವ ಕೆಲಸ ಹಾಗು ಕುತಂತ್ರ ನಡೆಯುತ್ತಿದೆ ಎಂದು ಆಕ್ಷೇಪಿಸಿದರು. ಈ ಸಂಬಂಧ ಸತ್ಯಾಸತ್ಯತೆಯನ್ನು ನಾವು ಜನರ ಮುಂದೆ ಇಡಬೇಕಾಗಿದೆ. ಪಕ್ಷದ ಗೌರವ ಉಳಿಸಬೇಕಿದೆ. ಕಾರ್ಯಕರ್ತರಿಗೆ ನೆಮ್ಮದಿ ನೀಡಬೇಕಿದೆ ಎಂದು ನುಡಿದರು.

ಚುನಾವಣೆಯಲ್ಲಿ ಬಿಜೆಪಿಯಿಂದಲೂ 4 ಅಡ್ಡ ಮತದಾನ ಆಗಿರುವ ಬಗ್ಗೆ ಚರ್ಚೆ ಮಾಧ್ಯಮಗಳಲ್ಲಿ ನಡೆಯುತ್ತಿದೆ. ಕಾರ್ಯಕರ್ತರು ನಮ್ಮ ಶಾಸಕರ ನಡವಳಿಕೆ ಬಗ್ಗೆ ಬಹಳ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಬಿಜೆಪಿಯ 63 ಶಾಸಕರ ಬಗ್ಗೆ ಅನುಮಾನ ಹುಟ್ಟುವಂತಾಗಿದೆ. ನಾನು ಮತ್ತು ಆರ್.ಅಶೋಕ್ ಅವರು ದೆಹಲಿಗೆ ಹೋಗಲಿದ್ದೇವೆ ಎಂದ ಅವರು, ಮತ್ತೊಂದು ಕಡೆ ಸತ್ಯಶೋಧನಾ ಸಮಿತಿ ಮಾಡಿದ್ದೇವೆ. ಸಿ.ಟಿ.ರವಿ, ಮಹೇಶ್ ಟೆಂಗಿನಕಾಯಿ, ಮಾಜಿ

» ನಾಲ್ಕನೇ ಪುಟದಲ್ಲಿ

## ಪಿಎಂ ಕಿಸಾನ್ ಸಮ್ಮಾನ್: 33,416 ರೈತರಿಗೆ 6.67 ಕೋ.ರೂ.

• ಪ್ರಜೋದಯ ವರದಿ

**ಸಕಲೇಶಪುರ:** ಕೃಷಿ ಚಟುವಟಿಕೆಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ-ಕಿಸಾನ್) ಯೋಜನೆ ರೈತರಿಗೆ ಉಪಯುಕ್ತವಾಗಿದ್ದು, ಕ್ಷೇತ್ರದ 33,416 ರೈತರಿಗೆ 6.67 ಕೋ.ರೂ. ಪಾವತಿಯಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದಲ್ಲಿ ಪಿಎಂ-ಕಿಸಾನ್ ಯೋಜನೆಯಡಿ ರೈತರ ಬ್ಯಾಂಕ್ ಖಾತೆಗಳಿಗೆ ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕ ಹಣ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ 8 ವರ್ಷಗಳಿಂದ ಅರ್ಹ ರೈತ ಕುಟುಂಬಗಳಿಗೆ ಪ್ರತಿ ಕಂತಿನಲ್ಲಿ 2 ಸಾವಿರ ರೂ. ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡುವ ವ್ಯವಸ್ಥೆ ಜಾರಿಗೊಳಿಸಿದೆ. ದೇಶಾದ್ಯಂತ ಈ ಕಂತಿನಲ್ಲಿ ಸುಮಾರು 830 ಕೋ. ರೂ. ಮೊತ್ತವನ್ನು ರೈತರ ಖಾತೆಗಳಿಗೆ ಡಿಬಿಟಿ ಮೂಲಕ ಜಮಾ ಮಾಡಲಾಗುತ್ತಿದ್ದು, ಇದುವರೆಗೆ ಸಾವಿರಾರು ಕೋಟಿ ರೂಪಾಯಿ ನೇರವಾಗಿ ರೈತರ ಖಾತೆಗಳಿಗೆ ವರ್ಗಾವಣೆ ಯಾಗಿದೆ. ಈ ಯೋಜನೆ ರೈತರ ಆರ್ಥಿಕ ಸಬಲೀಕರಣಕ್ಕೆ ನೆರವಾಗುತ್ತಿದೆ ಎಂದು ತಿಳಿಸಿದರು.





ಜಿಲ್ಲೆಯಲ್ಲಿ 2,07,831 ರೈತರಿಗೆ ಒಟ್ಟು 41.57 ಕೋ.ರೂ. ಜಮಾ ಆಗುತ್ತಿದ್ದು, ಸಕಲೇಶಪುರ ತಾಲ್ಲೂಕಿನ 11,583 ರೈತರಿಗೆ 2.32 ಕೋ.ರೂ., ಆಲೂರಿನ 16,063 ರೈತರಿಗೆ 3.21 ಕೋ.ರೂ., ಕಟ್ಟಾಯ ಹೋಬಳಿಯ 5,770 ರೈತರಿಗೆ 1.14 ಕೋ.ರೂ. ಸೇರಿ ಒಟ್ಟು 33,416 ರೈತರಿಗೆ 6.67 ಕೋ.ರೂ. ಜಮಾ ಆಗುತ್ತಿದೆ ಎಂದು ಮಾಹಿತಿ ನೀಡಿದರು.

ಯೋಜನೆಯಡಿ ದೊರೆಯುವ ನೆರವನ್ನು ಕೃಷಿ ಚಟುವಟಿಕೆಗಳಿಗೆ ಸಮರ್ಪಕವಾಗಿ ಬಳಸಿಕೊಂಡು ರೈತರು ಆರ್ಥಿಕವಾಗಿ ಮತ್ತಷ್ಟು ಸ್ವಾವಲಂಬಿಗಳಾಗಬೇಕೆಂದರು.

ಸಕಲೇಶಪುರ ಉಪವಿಭಾಗದ ಕೃಷಿ ಉಪನಿರ್ದೇಶಕ ಪ್ರಭಾಕರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಕಾಶ್, ಕುನಿಗನಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗಿರೀಶ್, ಸಹನಾ ಶಶಿಧರ್ ಇತರರಿದ್ದರು.

# ಕಾಡಾನೆ ಮೇಲೆ ನಿಗಾ ಇಡಲು ಟ್ರಾನ್ಸಮಿಟರ್ ರಿಸೀವರ್

## ರೇಡಿಯೋ ಕಾಲರ್ ಜೊತೆಗೆ ಮತ್ತೊಂದು ಸಾಧನ | ಎಲ್ಲಾ ಗಂಡಾನೆಗಳಿಗೆ ವಿಸ್ತರಿಸುವ ಚಿಂತನೆ

-ಮಲ್ಲಿಕಾರ್ಜುನ ಕೊಟ್ಟರಗಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಮಲೆನಾಡು ಭಾಗದಲ್ಲಿ ಹೆಚ್ಚಿರುವ ಕಾಡಾನೆಗಳ ಚಲನವಲನ ಅರಿಯಲು ಇಷ್ಟು ದಿನಗಳವರೆಗೆ ರೇಡಿಯೋ ಕಾಲರ್ ಮೊರೆ ಹೋಗುತ್ತಿದ್ದ ಅರಣ್ಯ ಇಲಾಖೆ ಆಧುನಿಕತೆ ಕಂಡು ಕೊಂಡಿದ್ದು, ಟ್ರಾನ್ಸಮಿಟರ್ ಅಳವಡಿಕೆಗೆ ಮುಂದಾಗಿದೆ.

ರೇಡಿಯೋ ಕಾಲರ್‌ನಿಂದ ಕಾಡಾನೆ ಎಲ್ಲಿದೆ ಎಂಬ ಮಾಹಿತಿ ಅಷ್ಟೇ ಸಿಗುತ್ತಿತ್ತು. ಆದರೆ, ಆಧುನಿಕವಾಗಿ ಪರಿಚಯಿಸಲ್ಪಟ್ಟಿರುವ ಟ್ರಾನ್ಸಮಿಟರ್ ರಿಸೀವರ್ ಅಳಡಿಸಿದರೆ ಕಾಡಾನೆ ಸುತ್ತಲಿನ ಅಂದಾಜು 400 ಮೀಟರ್ ಜಾಗವನ್ನು ನೋಡಬಹುದು. ರೇಡಿಯೋ ಕಾಲರ್‌ನ ಫಲಿತಾಂಶವು ಸ್ಯಾಟ್‌ಲೈಟ್ ಮೂಲಕ ಆನ್‌ಲೈನ್ ಪೋರ್ಟಲ್‌ಗೆ ಬಿತ್ತರವಾಗುತ್ತದೆ. ಅದೇ ರೀತಿ ಟ್ರಾನ್ಸಮಿಟರ್ ರಿಸೀವರ್ ಸಹ ಆನೆ ಸುತ್ತಲಿನ ಜಾಗದ ಜೊತೆಗೆ ಧ್ವನಿಯನ್ನು ಕಳುಹಿಸಿಕೊಡುತ್ತದೆ. ಆನೆ ಇರುವ ಜಾಗದಲ್ಲಿ ಸೆರೆ ಕಾರ್ಯಾಚರಣೆಗೆ ಅವಕಾಶ ಇದೆಯೇ, ಕಲ್ಲು ಬಂಡೆ, ನೀರು, ಗಿಡಗಂಟಿಗಳಿರುವ



ಜಾಗ ಅಥವಾ ಸಮತಟ್ಟು ಪ್ರದೇಶದಲ್ಲಿ ನಿಂತಿದೆಯೇ, ಇಲ್ಲವೇ ಎಂಬುದನ್ನು ನೂತನ ತಂತ್ರಜ್ಞಾನ ನಿಖರವಾಗಿ ಹೇಳಲಿದೆ. ಹೆಜ್ಜೆ ಗುರುತು ಆಧರಿಸಿ ಪತ್ತೆ ಮಾಡಲು ನೆರವಾಗಲಿದೆ. ಈಗಾಗಲೇ ಎರಡು ಆನೆಗಳಿಗೆ ಟ್ರಾನ್ಸಮಿಟರ್ ಹಾಕಲಾಗಿದೆ. ಅದರ ಫಲಿತಾಂಶ ನೋಡಿಕೊಂಡು ಎಲ್ಲಾ ಗಂಡು ಕಾಡಾನೆಗಳಿಗೆ ಅಳವಡಿಸಲು ಚಿಂತನೆ ನಡೆದಿದೆ.

**ಜಿಲ್ಲೆಯಲ್ಲಿವೆ 90 ಆನೆಗಳು**

ಜಿಲ್ಲೆಯ ಬೇಲೂರು, ಆಲೂರು, ಸಕಲೇಶಪುರ, ಅರಕಲಗೂಡು ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಿದೆ. ಒಟ್ಟು 85 ರಿಂದ 90 ಆನೆಗಳು ಹೆಚ್ಚಿದ್ದು, ಅದರಲ್ಲಿ 30ಕ್ಕೂ ಹೆಚ್ಚು ಆನೆಗಳು ಸಕಲೇಶಪುರ ತಾಲ್ಲೂಕಿನ ಯಸಳೂರು ಭಾಗದಲ್ಲಿ ಸಂಚರಿಸುತ್ತಿವೆ. ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿರುವ ಆನೆಗಳು ಆಗಾಗ ರಸ್ತೆ ದಾಟುತ್ತಾ ಸಾರ್ವಜನಿಕರಲ್ಲಿ ಭೀತಿಯುಂಟು ಮಾಡುತ್ತಿವೆ.

ಕಾಡಾನೆ ಹಾಗು ಮಾನವ ಸಂಘರ್ಷ ತಡೆಗೆ ಅರಣ್ಯ ಇಲಾಖೆ ಶಕ್ತಿ ಮೀರಿ ಶ್ರಮಿಸುತ್ತಿದೆ. ಜಿಲ್ಲೆಯಲ್ಲಿ 140 ಇಟಿಎಫ್ ಸಿಬ್ಬಂದಿ ಹೊರಗುತ್ತಿಗೆ ಆಧಾರದಡಿ ಕೆಲಸ ಮಾಡುತ್ತಿದ್ದು, ಆನೆಗಳ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದಾರೆ. 54 ಲ.ರೂ. ವೆಚ್ಚದಲ್ಲಿ 3 ಕ್ಯಾಂಪರ್ಸ್ ಹಾಗು 10 ಬೈಕ್‌ಗಳನ್ನು ಅರಣ್ಯ ಇಲಾಖೆಗೆ ನೀಡಲಾಗಿದೆ. ಜೊತೆಗೆ ಆನೆ ಸಂಚಾರ ಪ್ರದೇಶದ 35 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗಿದೆ.

**3 ವರ್ಷದಲ್ಲಿ 14 ಜನರ ಸಾವು**

ಕಾಡಾನೆಗಳ ದಾಳಿಗೆ 2023-24 ರಿಂದ 2026-27ರ ವರೆಗೆ 14 ಜನರು ಮೃತಪಟ್ಟಿದ್ದಾರೆ.ಕಾಡಾನೆಗಳ ಜೊತೆಗೆ ಕರಡಿ, ಕಾಡುಕೋಣ, ಕಾಡು ಹಂದಿ ಉಪಟಳವು ಮಲೆನಾಡಿನ ಜನರ ನಿದ್ದೆಗೆಡಿಸಿದೆ. ಕಳೆದ ಮೂರು ವರ್ಷಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಹಾನಿಗೀಡಾದ ಬೆಳೆ ಹಾಗು ಮೃತ ಕುಟುಂಬಕ್ಕೆ ಪರಿಹಾರ ಸೇರಿ ರಾಜ್ಯ ಸರ್ಕಾರ 15.16 ಕೋಟಿ ರೂ. ಬಿಡುಗಡೆ ಮಾಡಿದೆ.

2023ರಲ್ಲಿ 4.76 ಕೋ.ರೂ., 2024ರಲ್ಲಿ 4.19 ಕೋ.ರೂ., 2025ರಲ್ಲಿ 6.6 ಕೋ.ರೂ. ಹಾಗು ಈ ವರ್ಷ 75 ಲಕ್ಷ ರೂ. ಪರಿಹಾರ ನೀಡಲಾಗಿದೆ. ಇನ್ನು 60 ಲಕ್ಷ ರೂ. ಪರಿಹಾರದ ದನ ಬಾಕಿ ಇದೆ. ಇಷ್ಟು ವರ್ಷಗಳ ಕಾಲ ಪರಿಹಾರ ಮೊತ್ತವನ್ನು ಖಜಾನೆಯಿಂದ ನೇರವಾಗಿ ನೀಡಲಾಗುತ್ತಿತ್ತು. ಇನ್ನು ಮುಂದೆ ಡಿಬಿಟಿ ಮೂಲಕ ಕೊಡುವ ವ್ಯವಸ್ಥೆ ಮಾಡಿಕೊಂಡಿದ್ದು, ಫಲಾನುಭವಿಗಳು ಕಚೇರಿಗೆ ಅಲೆದಾಡುವುದು ತಪ್ಪಲಿದೆ.

### ಜನರ ನೆಮ್ಮದಿಗೆ ಭಂಗ ತಂದಿರುವ ಆನೆಗಳು

ಬೇಲೂರು, ಸಕಲೇಶಪುರ ಭಾಗದಲ್ಲಿ ಕಾಡಾನೆಗಳ ಉಪಟಳ ಮಿತಿಮೀರಿದ್ದು, ಸಾರ್ವಜನಿಕರ ನೆಮ್ಮದಿಗೆ ಭಂಗ ಉಂಟಾಗಿದೆ. ಕಾಫಿ ತೋಟಗಳನ್ನೇ ಆವಾಸ ಸ್ಥಾನವಾಗಿಸಿಕೊಂಡಿರುವ ಆನೆಗಳು ಯಾವಾಗ ಬೇಕೆಂದಾಗ ರಸ್ತೆಗೆ ಬರುತ್ತವೆ. ಇಂತಹ ಸಮಯದಲ್ಲಿ ವಾಹನ ಸವಾರರು ಸಿಲುಕಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಕಾಡಾನೆಗಳ ಸಂಚಾರದ ವಿಡಿಯೋಗಳು ನಿತ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು ಮಲೆನಾಡಿನ ಜನರ ಸಮಸ್ಯೆಗೆ ನಿದರ್ಶನವಾಗಿದೆ.

> **ಕಾಡಾನೆ-ಮಾನವ ಸಂಘರ್ಷ ತಡೆಗೆ ಅರಣ್ಯ ಇಲಾಖೆ ಎಲ್ಲಾ ಕ್ರಮ ಕೈಗೊಂಡಿದೆ. ಆಲೂರು ಭಾಗದಲ್ಲಿ ಅಳವಡಿಸಿರುವ ರೈಲ್ವೆ ಬ್ಯಾರಿಕೇಡ್ ಗೇಟ್‌ಗಳನ್ನು ಸ್ಥಳೀಯರು ಮುರಿದು ಹಾಕುತ್ತಿದ್ದಾರೆ. ಹೀಗೆ ಮಾಡಿದರೆ ನಮ್ಮ ಪ್ರಯತ್ನದ ಜೊತೆಗೆ ಸರ್ಕಾರದ ಕೋಟ್ಯಾಂತರ ರೂಪಾಯಿ ವ್ಯಯವಾಗುತ್ತದೆ. ಸಾರ್ವಜನಿಕರು ನಮ್ಮೊಂದಿಗೆ ಸಹಕರಿಸಬೇಕು.**
> **-ಸೌರಬ್‌ಕುಮಾರ್, ಡಿಸಿಎಫ್**

## ಬೇಲೂರಿನಲ್ಲಿ ಅರ್ಥಪೂರ್ಣ ಯೋಗ ದಿನಾಚರಣೆ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಚನ್ನಕೇಶವ ಸ್ವಾಮಿ ದೇವಾಲಯದ ಒಳ ಆವರಣದಲ್ಲಿ ಭಾನುವಾರ ತಾಲ್ಲೂಕು ಆಡಳಿತ, ಪುರಸಭೆ, ಬೆಂಗಳೂರಿನ ನಮನ್ ನಿಮಾನ್ಸ್ ಹಾಗು ಪತಂಜಲಿ, ರಾಘವೇಂದ್ರ ಯೋಗ ಕೇಂದ್ರದ ಸಹಯೋಗದಲ್ಲಿ 12ನೇ ಅಂತ ರ್ರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಹೆಚ್.ಕೆ.ಸುರೇಶ್ ಅವರು ಮಾತನಾಡಿ, ಮನುಷ್ಯನ ಮನಸ್ಸು, ದೇಹ ಹಾಗು ಆರೋಗ್ಯ ಕಾಪಾಡು

» ನಾಲ್ಕನೇ ಪುಟದಲ್ಲಿ



## ಜಿಲ್ಲೆಯಲ್ಲಿ ನೀಟ್ ಪರೀಕ್ಷೆ ಸುಸೂತ್ರ

• ಪ್ರಜೋದಯ ವರದಿ

**ಹಾಸನ:** ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಭಾನುವಾರ ನಿಗದಿ ಯಾದ ನೀಟ್-ಯುಜಿ ಮರು ಪರೀಕ್ಷೆ ಜಿಲ್ಲೆಯಲ್ಲಿ ಸುಸೂತ್ರವಾಗಿ ನಡೆಯಿತು.

ಜಿಲ್ಲಾದ್ಯಂತ ಏಳು ಪರೀಕ್ಷಾ ಕೇಂದ್ರ ತೆರೆಯಲಾಗಿತ್ತು. ಒಟ್ಟು 3504 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಪರೀಕ್ಷಾ ಸಮಯವನ್ನು 180 ನಿಮಿಷಗಳಿಂದ 195 ನಿಮಿಷಗಳಿಗೆ ಏರಿಕೆ ಮಾಡಲಾಗಿತ್ತು. ಪರೀಕ್ಷಾ ಕೇಂದ್ರಗಳ ಸುತ್ತ ಬಿಗಿ ಬಂದೋ ಬಸ್ತ್ ವಹಿಸಲಾಗಿತ್ತು. ಯಾವುದೇ ಗೊಂದಲ ಗಳಿಲ್ಲದೆ ಪರೀಕ್ಷೆ ನಡೆದಿದೆ ಎಂದು ಕೇಂದ್ರಿಯ ವಿದ್ಯಾಲಯ ಪ್ರಾಂಶುಪಾಲರಾದ ರಶ್ಮಿ ಕುಮಾರಿ ಅವರು ತಿಳಿಸಿದರು.

## ಕಾಡಾನೆಗಳ ದಾಳಿ : ಕಾಫಿ, ಅಡಿಕೆ, ಬೆಳೆ ಹಾನಿ

• ಪ್ರಜೋದಯ ವರದಿ

**ಅರಕಲಗೂಡು :** ತಾಲೂಕಿನ ಮಲ್ಲಿಪಟ್ಟಣ ಹೋಬಳಿಯ ಬಾಗದಾಳು ಗ್ರಾಮದಲ್ಲಿ ಕಾಡಾನೆಗಳ ಹಾವಳಿ ಮುಂದುವರಿದಿದ್ದು, ಎರಡು ಕಾಡಾನೆಗಳು ಕಾಫಿ ಹಾಗೂ ಅಡಿಕೆ ತೋಟಕ್ಕೆ ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿ ಉಂಟುಮಾಡಿವೆ.

ಗ್ರಾಮದ ಕಾಫಿ ಬೆಳೆಗಾರರ ಸಂಘದ ಹೆಚ್.ಡಿ.ಪಿ.ಎ. ನಿರ್ದೇಶಕ ಬಿ.ಜೆ.ಕಾಂತರಾಜು ಅವರ ತೋಟಕ್ಕೆ ಮಧ್ಯರಾತ್ರಿ ವೇಳೆ ಎರಡು ಕಾಡಾನೆಗಳು ತೋಟದ ಕಬ್ಬಿಣದ ಗೇಟ್‌ನ್ನು ಮುರಿದು ಒಳ ನುಗ್ಗಿ 20 ರಿಂದ 25ಕ್ಕೂ ಹೆಚ್ಚು ಅಡಿಕೆ ಮರಗಳನ್ನು ಮುರಿದು ಹಾಕಿ, ಕಾಫಿ ಗಿಡಗಳು , ಇತರೆ ಬೆಳೆಗಳಿಗೂ ಹಾನಿಪಡಿಸಿವೆ.

ಬಾಗದಾಳು ಸೇರಿ ಕಾಡಂಚಿನ ಗ್ರಾಮಗಳಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕಾಡಾನೆಗಳ ಸಂಚಾರ



ಹೆಚ್ಚಾಗಿದ್ದು, ರೈತರು ರಾತ್ರಿ ವೇಳೆ ತೋಟ-ಗದ್ದೆ ಕಾವಲು ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಅರಣ್ಯ ಇಲಾಖೆ ಶಾಶ್ವತ ಪರಿಹಾರ ಕ್ರಮ ಕೈಗೊಂಡು ಕಾಡಾನೆಗಳ ಹಾವಳಿಯನ್ನು ನಿಯಂತ್ರಿಸಬೇಕು ಹಾಗೂ ಬೆಳೆ ಹಾನಿಗೆ ತಕ್ಷಣ ಪರಿಹಾರ ಧನ ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

## ವಿದ್ಯುತ್ ತಗುಲಿ ಆರ್‌ಎಫ್‌ಓ ಸಾವು

• ಪ್ರಜೋದಯ ವರದಿ

**ಹಾಸನ:** ನೂತನ ಮನೆಗೆ ಕ್ಯೂರಿಂಗ್ ಮಾಡುತ್ತಿದ್ದಾಗ ವಿದ್ಯುತ್ ಸ್ಪರ್ಶಿಸಿ ವಲಯ ಅರಣ್ಯಾಧಿಕಾರಿ ಮೃತ ಪಟ್ಟಿರುವ ಘಟನೆ ಭಾನುವಾರ ನಗರದ ಸತ್ಯಮಂಗಲ ಬಡಾವಣೆಯಲ್ಲಿ ನಡೆದಿದೆ.



ಕುಣಿಗಲ್ ವಲಯ ಅರಣ್ಯಾಧಿಕಾರಿ ಪಿ.ಜಗದೀಶ್ (46) ಮೃತರು. ಬಡಾವಣೆಯಲ್ಲಿ ಮನೆ ನಿರ್ಮಿಸುತ್ತಿದ್ದ ಜಗದೀಶ್ ಅವರು ಗೋಡೆಗೆ ನೀರು ಹಾಕುವಾಗ ವಿದ್ಯುತ್ ತಗುಲಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇವರು 2015ರಿಂದ 2020ರ ವರೆಗೆ ಹಾಸನ ದಲ್ಲಿ ಆರ್‌ಎಫ್‌ಓ ಆಗಿ ಕರ್ತವ್ಯ ನಿರ್ವಹಿಸಿದ್ದರು. ಬಡಾವಣೆ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ.

# ನಿತ್ಯ ಅರ್ಧ ತಾಸು ಯೋಗ ಮಾಡಲು ಸಂಸದರ ಸಲಹೆ

• ಪ್ರಜೋದಯ ವರದಿ

**ಹಾಸನ:** ಮಾನಸಿಕ ಹಾಗು ದೈಹಿಕ ಸದೃಢತೆಗೆ ಪ್ರತಿದಿನ ಕನಿಷ್ಟ 30 ನಿಮಿಷ ಸಮಯವನ್ನು ಯೋಗಾಭ್ಯಾಸಕ್ಕೆ ಮೀಸಲಿಡಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾನಗರ ಪಾಲಿಕೆ, ಆಯುಷ್ ಇಲಾಖೆ ಹಾಗು ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 12ನೇ ಅಂತರ್ರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾತನಾಡಿದರು.

ಸಾವಿರಾರು ವರ್ಷಗಳಿಂದ ಭಾರತದಲ್ಲಿ ಯೋಗ ಜಾರಿಯಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಅದರ ಪ್ರಭಾವ ಎಲ್ಲೆಡೆ ವಿಸ್ತರಿಸಿ ಪ್ರತಿಯೊಬ್ಬರು ಯೋಗ ಪದ್ಧತಿಗೆ ಆಸಕ್ತಿ ತೋರುತ್ತಿದ್ದಾರೆ. ಯೋಗವು ನಮ್ಮ ದೇಹಕ್ಕೆ ಮಾತ್ರವಲ್ಲದೆ ಕುಟುಂಬದ ಆರೋಗ್ಯವನ್ನು ಸುಧಾರಿಸುತ್ತದೆ. ಮನುಷ್ಯ ಮಾನಸಿಕ ಹಾಗು ದೈಹಿಕವಾಗಿ ಸದೃಢನಾಗಿದ್ದರೆ ತಾನಾಗಿಯೇ ಕುಟುಂಬ ನೆಮ್ಮದಿಯಿಂದ ಇರುತ್ತದೆ. ಮನಸ್ಸಿನ ಉಲ್ಲಾಸ, ಆರೋಗ್ಯ ಹಾಗು ಸಕಾರಾತ್ಮಕ ಚಿಂತನೆಗಾಗಿ ಯೋಗ ಅಭ್ಯಾಸ ಮಾಡಬೇಕು. ನಿತ್ಯ 30 ನಿಮಿಷ ಯೋಗ ಮಾಡಿದರೆ ಮನಸ್ಸಿಗೆ ನೆಮ್ಮದಿ, ಶಾಂತಿ ಸಿಗುತ್ತದೆ. ನಾನು ಸಹ ನಿತ್ಯ ಜೀವನದಲ್ಲಿ ಯೋಗ ಅಳವಡಿಸಿಕೊಳ್ಳುತ್ತೇನೆಂದರು.



ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಪತಂಜಲಿ ಮಹರ್ಷಿಗಳು ಪರಿಚಯಿಸಿದ ಯೋಗ ಪದ್ಧತಿ ಇಂದು ವಿಶ್ವದಾದ್ಯಂತ ವ್ಯಾಪಿಸಿದೆ. ಪತಂಜಲಿ ಸಂಸ್ಥೆಗಳು ಸಹ ನಗರದ ಅನೇಕ ಕಡೆ ಶಾಖೆಗಳನ್ನು ತೆರೆದು ಕೆಲಸ ಮಾಡುತ್ತಿವೆ ಎಂದರು.

ಮನುಷ್ಯನಿಗೆ ಆಸ್ತಿಗಿಂತ ಆರೋಗ್ಯ ಮುಖ್ಯ. ಎಷ್ಟೇ ಗಳಿಸಿದರೂ ಆರೋಗ್ಯ ಕೈಕೊಟ್ಟರೆ ಎಲ್ಲವೂ ವ್ಯರ್ಥವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ಯೋಗ, ವ್ಯಾಯಾಮ ನಿತ್ಯ ಅಳವಡಿಸಿಕೊಳ್ಳಬೇಕೆಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಯೋಗ ಖಚಿತ ಆರೋಗ್ಯ ಉಚಿತ ಎಂಬ ಮಾತನ್ನು ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕು. ಈ ವರ್ಷ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷ ವಾಕ್ಯ ಹಾಕಿಕೊಳ್ಳಲಾಗಿದೆ. ಆರೋಗ್ಯ ಉತ್ತಮವಾಗಿರಬೇಕೆಂದರೆ ಎಲ್ಲರೂ ಯೋಗ ಮಾಡಬೇಕೆಂದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲ, ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಹಾಗು ಆಸ್ಪತ್ರೆ ನಿರ್ದೇಶಕ ಡಾ॥ ಪ್ರಸನ್ನ ನರಸಿಂಹ ರಾವ್, ಪ್ರಾಂಶುಪಾಲೆ ಡಾ. ಶೈಲಜಾ, ಗಾಯತ್ರಿ, ಪಲ್ಲವಿ, ವಿ.ಎಸ್.ರಾಣಿ, ಜಿಲ್ಲಾ ಆಯುಷ್ ಅಧಿಕಾರಿ ಡಾ॥ ಲಕ್ಷ್ಮಿಕಾಂತ್ ಮತ್ತಿತರರಿದ್ದರು. ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಉಪನ್ಯಾಸಕ ಗುರುಬಸವರಾಜ ಯಲಗಚ್ಚಿನ ಅವರು ಯೋಗ ತರಬೇತಿ ನೀಡಿದರು. ಮಹಿಳೆಯರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಅನರ್ಹರ ಕೈಬಿಡಲು ತಂತ್ರಜ್ಞಾನ ಬಳಕೆ


• ಪ್ರಜೋದಯ ವರದಿ

**ಬೆಂಗಳೂರು:** ಗ್ಯಾರಂಟಿ ಯೋಜನೆಗಳಿಂದ ಅನರ್ಹರನ್ನು ತೆಗೆದು ಹಾಕಲು ಆಧುನಿಕ ತಂತ್ರಜ್ಞಾನ ಬಳಸಿಕೊಳ್ಳಲಾಗುವುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ಎಲ್ಲಾ ಸೌಲಭ್ಯಗಳು ಅರ್ಹರಿಗೆ ಸಿಗಬೇಕು ಎಂಬ ಕಾರಣಕ್ಕೆ ಸಮಗ್ರ ಪರಿಷ್ಕರಣೆ ನಡೆಸಲಾಗುತ್ತಿದೆ. ಗ್ಯಾರಂಟಿ ಯೋಜನೆಗಳಲ್ಲಿ ಒಬ್ಬ ಫಲಾನುಭವಿಯ ನಾಲ್ಕೈದು ಖಾತೆಗಳಿಗೆ ಸೌಲಭ್ಯ ತಲುಪುತ್ತಿವೆ. ಮೃತಪಟ್ಟವರ ಖಾತೆಗಳಿಗೂ ಹಣ ಸಂದಾಯವಾಗಿದೆ. ಹೊರ ರಾಜ್ಯದವರ ಹೆಸರಿಗೆ ಸೌಲಭ್ಯಗಳು ಹೋಗಿವೆ. ಈ ಎಲ್ಲಾ ಲೋಪಗಳನ್ನು ಸರಿಪಡಿಸಿ ಯೋಜನೆಗಳನ್ನು ಪರಿಷ್ಕರಣೆ ಮಾಡಲಾಗುವುದು ಎಂದರು.

ಮುಖ್ಯಮಂತ್ರಿ ಅವರ ಜನಸ್ಪಂದನ ಇಲಾಖೆಯ ಮೂಲಕ ಆಧುನಿಕ ತಂತ್ರಜ್ಞಾನದಲ್ಲಿ ಜನರ ಮನೆ ಬಾಗಿಲಿಗೆ ಆಡಳಿತ ತಲುಪಿಸಲಾಗುತ್ತದೆ. ತಾಲ್ಲೂಕು ಮಟ್ಟದಲ್ಲೇ ಜನರ ಸಮಸ್ಯೆ ಪರಿಹಾರಬೇಕು ಎಂಬ ನಿಟ್ಟಿನಲ್ಲಿ ಪ್ರಯತ್ನ ನಡೆಸಲಾಗುತ್ತಿದೆ. ಅದಕ್ಕೆ ಮುಖ್ಯಮಂತ್ರಿ ಕಚೇರಿ ಹಾಗು ಇ-ಆಡಳಿತ ಜಂಟಿಯಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದರು.

ಬಿಡದಿ ಉಪನಗರ ನಿರ್ಮಾಣ ಯೋಜನೆಯಲ್ಲಿ ಜೆಡಿಎಸ್-ಬಿಜೆಪಿ ರಾಜಕೀಯ ಮಾಡುತ್ತಿವೆ. ಏಳೂವರೆ ಸಾವಿರ ಎಕರೆಯಲ್ಲಿ ಈಗಾಗಲೇ ಆರು ಸಾವಿರ ಎಕರೆಯ ಭೂ ಮಾಲೀಕರು ಭೂಸ್ವಾಧೀನಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ. 1,340 ಎಕರೆಯಷ್ಟು ಮಾತ್ರ ಬಾಕಿ ಇದೆ. ಸರ್ಕಾರ ದಬ್ಬಾಳಿಕೆ ಮಾಡಿ ಯಾರಿಂದಲೂ ಭೂಮಿ ಕಸಿದುಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.



# ಭಾವ ಲಹರಿ

## ಆ ಬೆಟ್ಟದ ಮೇಲೆ ಅರಳಿದ ಹೂವೇ ಈ ನಮ್ಮ ಪ್ರೀತಿ

### ಮುಂದಿನ ಪಯಣಕ್ಕೆ ಸ್ಫೂರ್ತಿ



ಇದು ಕಾಲ್ಪನಿಕ ಬರಹವಾಗಿದೆ.

ಕಾರ್ಖಾನೆಯ ಬೃಹತ್ ಕಬ್ಬಿಣದ ಗೇಟುಗಳು ಬರಿಯ ಕಾವಲು ಗೋಡೆಗಳಾಗಿರಲಿಲ್ಲ; ಅವು ಬಂಡವಾಳಶಾಹಿಯ ಕ್ರೌರ್ಯಕ್ಕೆ ಹಿಡಿದ ಕನ್ನಡಿಯಾಗಿದ್ದವು. ಒಳಗೆ ಯಂತ್ರಗಳು ಗರ್ಜಿಸುತ್ತಿದ್ದರೆ, ಹೊರಗೆ ಹಸಿದ ಹೊಟ್ಟೆಗಳ ಆಕ್ರೋಶ ಮೊಳಗುತ್ತಿತ್ತು. ಮಧ್ಯಾಹ್ನದ ಸೂರ್ಯನ ಕೆಂಡದಂತಹ ಬಿಸಿಲಿಗೆ ಕಾರ್ಖಾನೆಯ ತಗಡಿನ ಛಾವಣಿಗಳು ಕಾಯ್ದು ಕೆಂಪಗಾಗಿದ್ದವು. ಆದರೆ, ಆ ಬಿಸಿಲಿಗಿಂತಲೂ ತೀವ್ರವಾಗಿ ಉರಿಯುತ್ತಿದ್ದುದು ಕಾರ್ಮಿಕರ ಎದೆಯೊಳಗಿನ ಅಸಮಾಧಾನದ ಕಿಚ್ಚು. ಕಾರ್ಮಿಕ ನಾಯಕ ಸೂರ್ಯಕಾಂತ್ ಆ ಎತ್ತರದ ಕಾಂಪೌಂಡ್ ಗೋಡೆಯ ಮೇಲೆ ನಿಂತಾಗ, ಅವನ ಕೈಲಿದ್ದ ಕೆಂಪು ಬಾವುಟ ಬಿರುಗಾಳಿಗೆ ಸಿಕ್ಕ ಹದ್ದಿನಂತೆ ರೆಕ್ಕೆ ಬಡಿಯುತ್ತಿತ್ತು. ಆ ಕೆಂಪು ಬಣ್ಣ ಬರಿಯ ಬಟ್ಟೆಯಾಗಿರಲಿಲ್ಲ, ಅದು ಆ ಕಾರ್ಖಾನೆಯ ಮಣ್ಣಿನಲ್ಲಿ ಹರಿದು ಹೋದ ನೂರಾರು ಕಾರ್ಮಿಕರ ರಕ್ತದ ಸಂಕೇತವಾಗಿತ್ತು. ನೋಡಿ ಸ್ನೇಹಿತರೆ, ಈ ಯಂತ್ರಗಳು ಉಸಿರಾಡೋದು ನಾವು ಸುರಿಸೋ ಬೆವರಿನಿಂದ. ಈ ಕಬ್ಬಿಣದ ಚಕ್ರಗಳು ತಿರುಗುವುದು ನಮ್ಮ ನರಗಳ ಶಕ್ತಿಯಿಂದ. ಯಂತ್ರಕ್ಕೆ ಎಣ್ಣೆ ಹಾಕುವ ಮಾಲೀಕರಿಗೆ, ಆ ಯಂತ್ರ ನಡೆಸುವ ಮನುಷ್ಯನ ಹೊಟ್ಟೆಗೆ ಹಿಟ್ಟು ಹಾಕಲು ಮನಸ್ಸಿಲ್ಲ ಅಂದರೆ ಅದು ಬಂಡವಾಳವಲ್ಲ, ಅದು ಅಹಂಕಾರ! ಮುಂದುವರಿದು, ಈ ಕಾರ್ಖಾನೆಯ ಯಂತ್ರಗಳು ಉಗುಳುವುದು ಕೇವಲ ಹೊಗೆಯನ್ನಲ್ಲ, ನಮ್ಮ ಶ್ವಾಸಕೋಶದ ಗಾಳಿಯನ್ನು! ನಾವು ಕೇಳುತ್ತಿರುವುದು ನಮ್ಮ ಬೆವರಿನ ಹನಿಗಳಿಗೆ ನ್ಯಾಯಯುತವಾದ ಬೆಲೆಯನ್ನು ಮಾತ್ರ. ನೆನಪಿಡಿ, ಸಮುದ್ರ ಶಾಂತವಾಗಿದೆ ಎಂದರೆ ಅದರ ಅಲೆಗಳು ಸತ್ತಿವೆ ಎಂದಲ್ಲ, ಅದು ದೊಡ್ಡ ಸುನಾಮಿಗೆ ಸಿದ್ಧವಾಗುತ್ತಿದೆ ಎಂದರ್ಥ! ಹೀಗಂತ ಸೂರ್ಯಕಾಂತ್ ಕಾಂಪೌಂಡ್ ಗೋಡೆಯ ಮೇಲೆ ನಿಂತು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಿದ್ದ. ಅವನ ಧ್ವನಿ ಗಂಭೀರವಾಗಿತ್ತು. ಕಾರಣ ಕಾರ್ಖಾನೆಯ ಮಾಲೀಕ ಕಾರ್ಮಿಕರನ್ನು ಸರಿಯಾಗಿ ನಡೆಸಿಕೊಳ್ಳುತ್ತಿರಲಿಲ್ಲ. ಬಾಯಿಗೆ ಬಂದಂತೆ ಬೈಯ್ಯುತ್ತಲೇ ಇರುತ್ತಿದ್ದ. ಕಾಲಕಾಲಕ್ಕೆ ಕೊಡಬೇಕಾದ ಕಾರ್ಮಿಕರ ಸೌಲಭ್ಯಗಳನ್ನು ಕೊಡುತ್ತಿರಲಿಲ್ಲ. ಕಾರ್ಖಾನೆಯ ಬೃಹತ್ ಕಬ್ಬಿಣದ ಗೇಟುಗಳು ಕಾರ್ಮಿಕರ ಕನಸುಗಳನ್ನು ನುಂಗುವ ದೈತ್ಯ ಹಸಿವಿನ ಸಂಕೇತಗಳಾಗಿದ್ದವು. ಇವೆಲ್ಲದ್ದರಿಂದ ಬೇಸರಗೊಂಡ ಸೂರ್ಯಕಾಂತ್ ತನ್ನ ಕೆಂಪು ಶಾಲು ಹಾರಿಸುತ್ತಾ ಅಲ್ಲಿ ನಿಂತಾಗ, ಅವನ ಹಿಂದೆ ನೂರಾರು ಹಸಿದ ಹೊಟ್ಟೆಗಳ ದೃಢ ಸಂಕಲ್ಪವಿತ್ತು. ಅವನು ಮಾಲೀಕ ಧನರಾಜ್ ನ ಪ್ರತಿ ಮಾತಿಗೂ ಪ್ರಶ್ನಿಸುತ್ತಿದ್ದ. ಮಾಲೀಕ ಧನರಾಜ್ ಸೂರ್ಯಕಾಂತ್ ನನ್ನು ಕಂಡರೆ ಸಾಕು, ದ್ವೇಷ ಕಾರುತ್ತಿದ್ದ.

**ಮೇಘಾಳ ಆಗಮನ:** ಅಷ್ಟರಲ್ಲಿ ಮಿನುಗುವ ಬಿಳಿ ಕಾರೊಂದು ಜನಸಂದಣಿಯನ್ನು ಸೀಳಿಕೊಂಡು ಬಂತು. ಅದರಿಂದ ಇಳಿದವಳು ಮೇಘ ಕಾರ್ಖಾನೆಯ ಮಾಲೀಕ ಧನರಾಜ್ ನ ಏಕೈಕ ಪುತ್ರಿ. ವಿದೇಶದಲ್ಲಿ ಬಿಸಿನೆಸ್ ಮ್ಯಾನೇಜ್ ಮೆಂಟ್ ಓದಿ ಬಂದಿದ್ದ ಅವಳ ಕಣ್ಣುಗಳಲ್ಲಿ ಕಾರ್ಪೊರೇಟ್ ಪ್ರಪಂಚದ ಶಿಸ್ತಿತ್ತು, ಆದರೆ ತಂದೆಯ ಮೇಲಿನ ಅತಿಯಾದ ನಂಬಿಕೆಯೂ ಇತ್ತು. ಜೊತೆಗೆ ಮನಸ್ಸಿನಲ್ಲಿ ಮಣ್ಣಿನ ಮಮತೆಯಿತ್ತು. ಅವಳ ಮುಖದಲ್ಲಿ ಶ್ರೀಮಂತಿಕೆಯ ದರ್ಪವಿರಲಿಲ್ಲ, ಬದಲಿಗೆ ಒಂದು ರೀತಿಯ ಕುತೂಹಲವಿತ್ತು. ಸೂರ್ಯಕಾಂತ್ ಅವರೇ, ಸಮಾಜದಲ್ಲಿ ಸಮಾನತೆ ಅನ್ನೋದು ಕೇವಲ ಪುಸ್ತಕದ ಸಾಲುಗಳಲ್ಲಿ ಚೆನ್ನಾಗಿರುತ್ತೆ. ವಾಸ್ತವದಲ್ಲಿ ಏಣಿ ಇರೋದೇ ಹತ್ತಲು, ತುಳಿಯಲು ಅಲ್ಲ ಅನ್ನೋದು ನಿಮಗೂ ಗೊತ್ತಿದೆ ಅಲ್ವಾ? ಅಂತ ಮೇಘ ಹೇಳಿದಾಗ ಸೂರ್ಯಕಾಂತ್ (ನಿಧಾನವಾಗಿ ಕೆಳಗಿಳಿದು) ಮೇಘ ಅವರೇ, ಏಣಿ ಹತ್ತುವವನು ನೆಲದ ಮೇಲಿರುವವರನ್ನು ಮರೆತರೆ, ಏಣಿ ಜಾರಿದಾಗ ಅವನನ್ನು ಹಿಡಿಯಲು ಕೆಳಗೆ ಯಾರೂ ಇರೋದಿಲ್ಲ. ನಿಮ್ಮ ತಂದೆಗೆ ಲಾಭದ ಅಂಕಿ-ಅಂಶಗಳು ಗೊತ್ತು, ನಮಗೆ ಬದುಕಿನ ಸಂಕಟ ಗೊತ್ತು. ಲಾಭ ಅನ್ನೋದು ಗಿಡದ ತುದಿಯಲ್ಲಿ ಅರಳುವ ಹೂವಿನಂತೆ, ನೋಡಲು ಆಕರ್ಷಕ. ಆದರೆ ಕಾರ್ಮಿಕ ಅನ್ನೋನು ಆ ಗಿಡವನ್ನು ಗಟ್ಟಿಯಾಗಿ ಹಿಡಿದಿಟ್ಟಿರುವ ಮಣ್ಣಿನೊಳಗಿನ ಬೇರು. ಬೇರಿಲ್ಲದೆ ಹೂವು ಅರಳಲು ಸಾಧ್ಯವೇ? ನೀವು ಹೂವಿನ ಸುಗಂಧದ ಬಗ್ಗೆ ಮಾತನಾಡುತ್ತಿದ್ದೀರಿ, ನಾನು ಆ ಬೇರುಗಳಿಗೆ ನೀರಿಲ್ಲದೆ ಒಣಗುತ್ತಿರುವ ಸತ್ಯದ ಬಗ್ಗೆ ಮಾತನಾಡುತ್ತಿದ್ದೇನೆ. ಹೊಟ್ಟೆ ತುಂಬಿದವರಿಗೆ ತತ್ವಶಾಸ್ತ್ರ ಬೋಧಿಸುವುದು ಸುಲಭ, ಆದರೆ ಹಸಿದ ಹೊಟ್ಟೆಗೆ ಅದು ಕಿವಿಯ ಮೇಲೆ ಬಿದ್ದ ಕಾದ ಸೀಸದಂತೆ ಕೇಳಿಸುತ್ತದೆ. ಕಾರ್ಮಿಕರ ಹಕ್ಕು ಅನ್ನೋದು ಈ ನೆಲದ ಬೇರಿನಂತೆ. ಬೇರು ಒಣಗಿದರೆ ಹೂವು ಅರಳಲು ಸಾಧ್ಯವೇ? ಮೇಘ ಅವರೇ ನೀವೇ ಹೇಳಿ. ಎಂದು ಮರು ಪ್ರಶ್ನೆ ಕೇಳಿದನು. ಮೇಘ ಮೊದಲ ಬಾರಿಗೆ ಬದುಕಿನ ಕಠಿಣ ವಾಸ್ತವದ ಮಾತನ್ನು ಕೇಳಿ ನಿರುತ್ತರಳಾದಳು. ಅವಳ ಬುದ್ಧಿಗೆ ಆ ಮಾತುಗಳು ತರ್ಕಬದ್ಧವಾಗಿ ಕಂಡರೆ, ಹೃದಯಕ್ಕೆ ಒಂದು ಸಣ್ಣ ಸಂಕಟವನ್ನು ತಂದಿಟ್ಟವು. ಎಲ್ಲವನ್ನು ಕೇಳಿಸಿಕೊಂಡರೂ ತಂದೆಯ ಮೇಲಿನ ಗೌರವ, ನಂಬಿಕೆಯಿಂದ ಮೇಘ ಸೂರ್ಯಕಾಂತ್ ಅವರೇ, ಗಲಾಟೆ ಮಾಡೋದ್ರಿಂದ ಯಾವುದೂ ಬಗೆಹರಿಯಲ್ಲ. ಬನ್ನಿ, ಕೂತು ಮಾತನಾಡೋಣ. ಅಂದಾಗ ಸೂರ್ಯಕಾಂತ್ (ಗಂಭೀರವಾಗಿ) ಮಾತನಾಡೋ ಕಾಲ ಮುಗಿದಿದೆ ಮೇಘ ಅವರೇ. ಈಗೇನಿದ್ದರೂ ನಿರ್ಧಾರವಾಗಬೇಕು. ಹಸಿದ ಹೊಟ್ಟೆಗೆ ಮಾತುಗಳು ಊಟವಾಗಲ್ಲ, ಬರಿ ಭರವಸೆಗಳು ಔಷಧಿಯಾಗಲ್ಲ. ಎಂದನು. ಆದರೂ ಕೊನೆಯಲ್ಲಿ ಮೇಘಾಳೊಂದಿಗೆ ಮಾತುಕತೆಗೆ ಒಪ್ಪಿಕೊಂಡ.

**ಮಳೆಯಲ್ಲಿ ಮಾತುಕತೆ:** ಹೀಗೆಯೇ ದಿನಗಳು ಉರುಳಿದವು. ಸಂಧಾನದ ಮಾತುಕತೆಗಳು ಹತ್ತಾರು ಬಾರಿ ನಡೆದರೂ ಹಠಮಾರಿ ಮಾಲೀಕ ಧನರಾಜ್ ನಯಾಪೈಸೆಯನ್ನು ಕೊಡಲಿಲ್ಲ. ಈ ಮಧ್ಯೆ, ಪ್ರತೀ ಮಾತುಕತೆಯಲ್ಲೂ ಮೇಘ ತನ್ನ ತಂದೆಯ ಪರವಾಗಿ ಮತ್ತು ಸೂರ್ಯಕಾಂತ್ ಕಾರ್ಮಿಕರ ಪರವಾಗಿ ವಾದಿಸುತ್ತಿದ್ದರು. ಆದರೆ, ವೈಚಾರಿಕವಾಗಿ ಎದುರಾಳಿಗಳಾಗಿದ್ದ ಇಬ್ಬರ ನಡುವೆ ಕಣ್ಣಿಗೆ ಕಾಣದ ಭಾವನಾತ್ಮಕ ಸೇತುವೆಯೊಂದು ನಿರ್ಮಾಣವಾಗುತ್ತಿತ್ತು. ಒಂದು ಸಂಜೆ, ಮಳೆ ವಿಪರೀತವಾಗಿ ಸುರಿಯುತ್ತಿತ್ತು. ಕಾರ್ಖಾನೆಯ ಆವರಣದ ಸಣ್ಣ ಕ್ಯಾಂಟೀನ್‌ನಲ್ಲಿ ಇಬ್ಬರೂ ಮುಖಾಮುಖಿಯಾದರು. ಅದು ಕೇವಲ ಇಬ್ಬರು ವ್ಯಕ್ತಿಗಳ ಭೇಟಿಯಾಗಿರಲಿಲ್ಲ, ಹಸಿದ ಹೊಟ್ಟೆ ಮತ್ತು ತುಂಬಿದ ಕೈಗಳ ನಡುವಿನ ಸಂವಾದವಾಗಿತ್ತು. ಮೇಘಾ ತಂದ ಕಾಗದ ಪತ್ರಗಳನ್ನು ಸೂರ್ಯಕಾಂತ್ ಗಮನಿಸುತ್ತಿದ್ದ. ಆಗ ಮೇಘ, ಸೂರ್ಯಕಾಂತ್ ಅವರೇ, ಸಮಾಜದಲ್ಲಿ ಸಮಾನತೆ ಅನ್ನೋದು ಕೇವಲ ಕವಿತೆಗಳಲ್ಲಿ ಅಥವಾ ಕ್ರಾಂತಿಯ ಭಾಷಣಗಳಲ್ಲಿ ಕೇಳಲು ಚೆನ್ನಾಗಿರುತ್ತೆ. ವಾಸ್ತವದ ಮಾರುಕಟ್ಟೆ ನಡೆಯೋದು ಲಾಭದ ಲೆಕ್ಕಾಚಾರದ ಮೇಲೆ. ಈ ರೀತಿ ದಿನವೂ ಮುಷ್ಕರ ಹೂಡಿದರೆ ಕಾರ್ಖಾನೆ ಮುಚ್ಚಿಹೋಗುತ್ತದೆ, ಆಗ ನಿಮ್ಮ ಕಾರ್ಮಿಕರು ಬೀದಿಗೆ ಬೀಳಬೇಕಾಗುತ್ತದೆ. ಮುಂದುವರಿದು, ನೀನು ಯಾಕೆ ಇಷ್ಟೊಂದು ಹಠ ಮಾಡ್ತೀಯಾ ಸೂರ್ಯಕಾಂತ್? ಯಾಕೆ ನೀನು ಯಾವಾಗಲೂ ಇಷ್ಟೊಂದು ಕಠಿಣವಾಗಿ ಇರ್ತೀಯಾ? ನಿನಗೆ ನಿನ್ನ ಜೀವನ, ನಿನ್ನ ಸುಖ ಮುಖ್ಯ ಅನ್ನೋದಿಲ್ವಾ? ಅಂದಾಗ ಸೂರ್ಯಕಾಂತ್ (ಮಂದಹಾಸದೊಂದಿಗೆ) ಮೇಘ ಅವರೇ, ಈ ಸಮಾಜದಲ್ಲಿ ಕೆಲವರು ದೀಪವಾಗಬೇಕು, ಇನ್ನು ಕೆಲವರು ಆ ದೀಪ ಉರಿಯಲು ಎಣ್ಣೆಯಾಗಬೇಕು. ನಾನಂತೂ ಬೆವರಿನ ರೂಪದ ಎಣ್ಣೆಯಾಗಿ ಅವರ ಬದುಕನ್ನು ಬೆಳಗಲು ಇಷ್ಟಪಡುತ್ತೇನೆ. ನನ್ನ ವೈಯಕ್ತಿಕ ಸುಖ ಅಂದ್ರೆ, ನನ್ನ ಜೊತೆ ಇರೋ ನೂರು ಕುಟುಂಬಗಳ ಮುಖದಲ್ಲಿರೋ ನಗು. ಎಂದು ಹೇಳಿದ. ಆಗ ಮೇಘ ಸೂರ್ಯಕಾಂತ್, ನಿನ್ನನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ನಿನ್ನದೇ ವಯಸ್ಸಿನ ಬೇರೆ ಹುಡುಗರು ತಮ್ಮ ಭವಿಷ್ಯ, ಮನೆ, ಕಾರು, ಸಂಸಾರ ಅಂತ ಕನಸು ಕಾಣ್ತಾರೆ. ಆದರೆ ನೀನು ದಿನವೂ ಪೊಲೀಸರ ಲಾಠಿ, ಕೋರ್ಟು, ಕಚೇರಿ ಅಂತ ಯಾಕೆ ನಿನ್ನ ಬದುಕನ್ನು ನರಕ ಮಾಡಿಕೊಳ್ಳುತ್ತಿದ್ದೀಯಾ? ಜೀವನ ಅಂದ್ರೆ, ಸುಖವಾಗಿ ಇರೋದು ಅಂದುಕೊಂಡಿದ್ದೆ. ಆದರೆ ನಿನ್ನನ್ನು ನೋಡಿದ್ರೆ, ಹೋರಾಟವೇ ಜೀವನ ಅನ್ಸುತ್ತೆ. ನಿನಗೆ ಸೋಲಿನ ಭಯ ಇಲ್ವಾ? ಹಾಗೆಯೇ ಮಾತನ್ನು ಮುಂದುವರಿಸಿದ ಮೇಘ, ಸೂರ್ಯಕಾಂತ್, ಹಠ ಮಾಡುವುದರಿಂದ ವ್ಯವಹಾರ ನಡೆಯುವುದಿಲ್ಲ. ಲಾಭವಿಲ್ಲದೆ ನಾವು ಕಾರ್ಖಾನೆ ನಡೆಸಲು ಸಾಧ್ಯವಿಲ್ಲ ಎಂಬ ವಾಸ್ತವ ನಿಮಗೆ ಅರ್ಥವಾಗುತ್ತಿಲ್ಲವೇ? ಸೂರ್ಯಕಾಂತ್ (ಕಿರುನಗುವಿನೊಂದಿಗೆ): ಮೇಘ ಅವರೇ, ಲಾಭ ಅನ್ನೋದು ಗಿಡದ ಮೇಲಿನ ಹೂವಿನಂತೆ, ನೋಡಲು ಸುಂದರ. ಆದರೆ ಕಾರ್ಮಿಕ ಅನ್ನೋನು ಆ ಗಿಡದ ಬೇರು. ಬೇರಿಲ್ಲದೆ ಹೂವು ಅರಳದು. ನೀವು ಬರಿ ಹೂವಿನ ಸುಗಂಧದ ಬಗ್ಗೆ ಮಾತಾಡ್ತಿದ್ದೀರಾ, ನಾನು ಆ ಬೇರುಗಳಿಗೆ ಬೀಳುತ್ತಿರುವ ಕೊಡಲಿಯೇಟಿನ ಬಗ್ಗೆ ಮಾತಾಡ್ತಿದ್ದೀನಿ. ಹೊಟ್ಟೆ ತುಂಬಿದವರಿಗೆ ಉಪದೇಶ ಸುಲಭ, ಆದರೆ ಹೊಟ್ಟೆ ಹಸಿದವರಿಗೆ ಅದು ವಿಷದಂತೆ ಕೇಳಿಸುತ್ತದೆ. ಎಂದ. ಸೂರ್ಯಕಾಂತ್ (ಹೊರಗೆ ಬೀಳುತ್ತಿದ್ದ ಮಳೆಹನಿಗಳನ್ನು ಕೈಯಲ್ಲಿ ಹಿಡಿಯುತ್ತಾ) ನೋಡು ಮೇಘ, ಈ ಮಳೆ ಹನಿಗಳು ಆಕಾಶದಿಂದ ಬೀಳುವಾಗ ತಾನು ಮಣ್ಣಲ್ಲಿ ಕರಗಿ ಹೋಗ್ತೀನಿ ಅನ್ನೋ ಭಯ ಇರೋದಿಲ್ಲ. ಯಾಕಂದ್ರೆ, ಅದಕ್ಕೆ ಗೊತ್ತು, ತಾನು ಕರಗಿದರೇನೇ ಭೂಮಿ ಹಸಿರಾಗೋದು ಅಂತ. ನಾನೂ ಅಷ್ಟೇ, ನನ್ನ ಹೋರಾಟದಲ್ಲಿ ನಾನು ಕರಗಿ ಹೋಗಬಹುದು ಅಥವಾ ಜೈಲು ಸೇರಬಹುದು. ಆದರೆ ಆ ತ್ಯಾಗ ನೂರು ಬಡವರ ಒಲೆಯಲ್ಲಿ ಮುಂಜಾನೆಯ ಮುಗುಳ್ನಗುವಾಗಿ ಅರಳುತ್ತದೆ ಎಂದರೆ, ಆ ಸೋಲಲ್ಲೂ ಒಂದು ಪವಿತ್ರವಾದ ಗೆಲುವಿರುತ್ತೆ ಅಲ್ವಾ? ಅಂದಾಗ ಮೇಘ ಅವನನ್ನೇ ನೋಡುತ್ತಾ ನಿಂತಳು. ಅವಳ ಕಣ್ಣುಗಳಲ್ಲಿ ತುಂಬಿದ್ದ ಶ್ರೀಮಂತಿಕೆಯ ದರ್ಪ ಆ ಮಳೆಯ ನೀರಿನಂತೆ ಕರಗಿ ಹೋಗಿತ್ತು. ಆಗ ಮೇಘ, ನಿನ್ನ ಮಾತುಗಳು ಗಾಯಕ್ಕೆ ಹಚ್ಚುವ ಮುಲಾಮಿನಂತಿದೆ. ನನ್ನ ಪ್ರಪಂಚ ಬರಿ ಗೋಡೆಗಳ ಮಧ್ಯೆ ಇತ್ತು. ನಿನ್ನ ಪ್ರಪಂಚ ಈ ವಿಶಾಲವಾದ ಮನುಷ್ಯರ ಮಧ್ಯೆ ಇದೆ. ಮೇಘಾಳಿಗೆ ಸೂರ್ಯಕಾಂತ್ ನ ಮೇಲಿದ್ದ ಸಿಟ್ಟು ಹೋಗಿ, ಗೌರವ ಮೂಡಿತು. ಆತನ ಹೋರಾಟದ ಹಿಂದಿರೋ ಪ್ರಾಮಾಣಿಕತೆ ಅವಳ ಮನಸ್ಸನ್ನು ಗೆದ್ದಿತು. ಮೇಘಾಳಿಗೆ ಆತನ ಮಾತಿನಲ್ಲಿದ್ದ ಸತ್ಯದ ತೂಕ ಅರ್ಥವಾಯಿತು. ಅವಳು ಆತನ ಹೋರಾಟದಲ್ಲಿ ಒಬ್ಬ ವಿರೋಧಿಯಾಗಿ ಬಂದವಳು, ಆತನ ವ್ಯಕ್ತಿತ್ವಕ್ಕೆ ಸೋತು ಹೋದಳು.

**ಪ್ರೀತಿ - ಅಧಿಕಾರಕ್ಕಿಂತ ದೊಡ್ಡದು:** ಒಂದು ರಾತ್ರಿ ವೇಳೆ ಮುಷ್ಕರ ಕುಳಿತಿದ್ದ ಕಾರ್ಮಿಕರಿಗೆ ಮೇಘ ರಹಸ್ಯವಾಗಿ ಆಹಾರ ತಂದಿದ್ದಳು. ಚಂದಿರನ ಬೆಳಕಿನಲ್ಲಿ ಇಬ್ಬರೂ ಗೇಟಿನ ಪಕ್ಕದ ಕಟ್ಟೆಯ ಮೇಲೆ ಕುಳಿತಿದ್ದರು. ಮೇಘ ನಿನ್ನ ಈ ಜೀವನ ಯಾವಾಗಲೂ ಹೋರಾಟದಲ್ಲೇ ಕಳೆದುಹೋಗುತ್ತಾ ಸೂರ್ಯಕಾಂತ್? ನಿನಗೆ ನಿನ್ನದೇ ಆದ ಸಂಸಾರ, ಶಾಂತಿ ಬೇಡವಾ? ಅಂತ ಮೇಘ ಕೇಳಿದಾಗ, ಸೂರ್ಯಕಾಂತ್, ಮೇಘ, ಈ ಸಮಾಜದಲ್ಲಿ ಎಲ್ಲರೂ ತನ್ನ ಸುಖವನ್ನೇ ನೋಡಿಕೊಂಡರೆ, ದೀನದಲಿತರ ಪರವಾಗಿ ಕಣ್ಣೀರು ಹಾಕುವವರು ಯಾರು? ನೂರು ದೀಪಗಳನ್ನು ಬೆಳಗಲು ಒಬ್ಬ ಹತ್ತಿಯ ಬತ್ತಿಯಾಗಿ ಸುಡಲೇಬೇಕು. ಆ ಬತ್ತಿಯಾಗುವ ಅವಕಾಶ ಸಿಕ್ಕಿದ್ದೇ ನನ್ನ ಸೌಭಾಗ್ಯ. ಆಗ ಮೇಘ (ಭಾವಪರವಶಳಾಗಿ): ಆ ಬತ್ತಿ ಸುಡುವಾಗ ಅದಕ್ಕೆ ಎಣ್ಣೆಯಾಗಿ ಸದಾ ಜೊತೆಗಿರಲು ನನಗೂ ಆಸೆ ಇದೆ ಸೂರ್ಯಕಾಂತ್. ಕಾರ್ಮಿಕರ ಮೇಲೆ ನಿನಗಿರುವ ಪ್ರೀತಿ ನನಗೆ ಅಧಿಕಾರಕ್ಕಿಂತ ದೊಡ್ಡದಾಗಿ ಕಾಣುತ್ತಿದೆ. ಕಾರ್ಮಿಕರ ಬೆವರಿನಲ್ಲಿ ನನಗೂ ಒಂದು ಭಾಗ ಸಿಗಲಿ. ಎನ್ನುತ್ತಾ, ಸೂರ್ಯಕಾಂತ್, ನಿನ್ನ ಈ ದಾರಿಯಲ್ಲಿ ನಾನೂ ಜೊತೆಯಾದರೆ? ನನಗೂ ನಿನ್ನ ಜೊತೆ ನಡೆಯೋಕೆ ಅವಕಾಶ ಕೊಡ್ತೀಯಾ? ನಿನ್ನ ಹೋರಾಟಕ್ಕೆ ಶಕ್ತಿಯಾಗಿ, ನಿನ್ನ ಪ್ರೇಮಕ್ಕೆ ಸಾಕ್ಷಿಯಾಗಿ ಇರಬೇಕು ಅಂತ ಆಸೆ ಇದೆ. ಎಂದಳು. ಅದಕ್ಕೆ ಸೂರ್ಯಕಾಂತ್ (ಮೃದುವಾಗಿ ನಗುನಗುತ್ತಾ) ಬೇಡ ಮೇಘ, ಪ್ರೀತಿ ಅನ್ನೋದು ರಾಜಕುಮಾರಿಗೆ ಸಿಗುವ ರೇಷ್ಮೆ ಹಾಸಿಗೆಯಲ್ಲ. ನನ್ನ ಜೊತೆ ಬರುವುದೆಂದರೆ ಮುಳ್ಳಿನ ಕಿರೀಟವನ್ನು ಧರಿಸಿದಂತೆ. ಶ್ರೀಮಂತಿಕೆಯ ವೈಭೋಗದಲ್ಲಿ ಬೆಳೆದ ನೀನು, ಕಾರ್ಮಿಕರ ಗುಡಿಸಲಿನಲ್ಲಿ ಒಣ ರೊಟ್ಟಿಯನ್ನು ಪ್ರೀತಿಯಿಂದ ಹಂಚಿಕೊಳ್ಳಬಲ್ಲೆಯಾ? ನನ್ನ ಬದುಕು ಸದಾ ಚಂಡಮಾರುತಕ್ಕೆ ಸಿಕ್ಕ ದೋಣಿಯಂತೆ, ಅಲ್ಲಿ ನಿನಗೆ ನೆಮ್ಮದಿ ಸಿಗುತ್ತಾ? ಮೇಲಾಗಿ, ನನ್ನ ದಾರಿ ಮಲ್ಲಿಗೆಯ ಹಾದಿಯಲ್ಲ, ಇದು ಕಲ್ಲು ಮುಳ್ಳುಗಳ ಹಾದಿ. ಇಲ್ಲಿ ಸೌಂದರ್ಯಕ್ಕಿಂತ ಸತ್ಯಕ್ಕೆ ಬೆಲೆ ಹೆಚ್ಚು. ರಾಜಕುಮಾರಿಯಂತಿರುವ ನೀನು ನನ್ನೊಂದಿಗೆ ಹೇಗೆ ಬಾಳ್ವೆ ಮಾಡುವೆ? ಎಂದನು. ಆಗ ಮೇಘ, ಚಂಡಮಾರುತದಲ್ಲೂ ದೋಣಿ ಮುಳುಗದಂತೆ ಕಾಯುವ ಚುಕ್ಕಾಣಿ ನಾನಾಗುತ್ತೇನೆ ಸೂರ್ಯಕಾಂತ್. ನಿನ್ನ ಆದರ್ಶಗಳೇ ನನ್ನ ಪ್ರೀತಿಯ ಉಸಿರು. ಎಂದಳು.

**ಮುಷ್ಕರ ಮತ್ತು ಸಂಘರ್ಷ:** ಕಾರ್ಮಿಕರಿಂದ ಕಾರ್ಖಾನೆಯ ಮುಷ್ಕರ ಆರಂಭವಾಗಿ ಇಪ್ಪತ್ತನೇ ದಿನಕ್ಕೆ ಕಾಲಿಟ್ಟಿತು. ಕಾರ್ಖಾನೆಯ ಮಾಲೀಕರು ಬಗ್ಗಲಿಲ್ಲ, ಮಾಲೀಕ ಧನರಾಜ್ ಕಾರ್ಮಿಕರ ಒಗ್ಗಟ್ಟನ್ನು ಮುರಿಯಲು ಪೊಲೀಸ್ ಬಲವನ್ನು ಬಳಸಿ ಲಾಠಿ ಪ್ರಹಾರ ನಡೆಸಲು ತೀರ್ಮಾನಿಸಿದನು. ಒಂದು ಅಮಾವಾಸ್ಯೆಯ ರಾತ್ರಿ, ನೂರಾರು ಪೊಲೀಸರು ಲಾಠಿ ಮತ್ತು ಕಣ್ಣುರಿಯುವ ಅನಿಲದೊಂದಿಗೆ ಧರಣಿ ನಿರತರಾಗಿದ್ದ ಕಾರ್ಮಿಕರ ಮೇಲೆ ಮುಗಿಬಿದ್ದರು. ಕಾರ್ಖಾನೆಯ ಆವರಣ ರಣರಂಗವಾಯಿತು.

ಸೂರ್ಯಕಾಂತ್ ತನ್ನ ಜನರನ್ನು ಉಳಿಸಲು ಪೊಲೀಸರ ಮುಂದೆ ಎದೆಯೊಡ್ಡಿ ನಿಂತು ತೀವ್ರವಾಗಿ ಗಾಯಗೊಂಡನು. ಅವನ ತಲೆಯಿಂದ ರಕ್ತ ಹರಿದು ಆ ಮಣ್ಣನ್ನು ಕೆಂಪು ಮಾಡುತ್ತಿತ್ತು. ಈ ವಿಷಯ ತಿಳಿದ ತಕ್ಷಣ ಮೇಘ ಅಲ್ಲಿಗೆ ಓಡಿ ಬಂದಳು. ರಕ್ತಸಿಕ್ತನಾಗಿದ್ದ ಸೂರ್ಯಕಾಂತ್ ನನ್ನು ಕಂಡು ಅವಳ ಹೃದಯ ಚೂರಾಯಿತು. ಅವಳು ತನ್ನ ತಂದೆಯ ಕ್ರೌರ್ಯದ ವಿರುದ್ಧ ಸಿಡಿದೆದ್ದಳು. ಮಾರನೇ ದಿನ ಅವಳು ಯಾವುದೇ ಹಿಂಜರಿಕೆಯಿಲ್ಲದೆ ಮಾಧ್ಯಮಗಳ ಮುಂದೆ ನಿಂತಳು. ತನ್ನ ಸ್ವಂತ ತಂದೆಯ ಕಾರ್ಖಾನೆಯಲ್ಲಿ ನಡೆಯುತ್ತಿದ್ದ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಭ್ರಷ್ಟಾಚಾರದ ಎಲ್ಲಾ ದಾಖಲೆಗಳನ್ನು ಸಮಾಜದ ಮುಂದೆ ತೆರೆದಿಟ್ಟಳು. ಮಗಳೇ ವಿರೋಧಿಯಾಗಿ ನಿಂತಾಗ ಧನರಾಜ್‌ನ ಅಧಿಕಾರದ ಅಹಂಕಾರ ಕುಸಿದು ಮಲಗಿತು. ಸರ್ಕಾರವು ಮಧ್ಯ ಪ್ರವೇಶಿಸಿ ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ಆದೇಶಿಸಿತು. ಕಾರ್ಮಿಕರಿಗೆ ಸಲ್ಲಬೇಕಾದ ಸೌಲಭ್ಯಗಳನ್ನು ಕೊಡಿಸಲು ಅವಳು ಸೂರ್ಯಕಾಂತನಿಗೆ ಬೆನ್ನೆಲುಬಾಗಿ ನಿಂತಳು. ಏಕೆಂದರೆ ಮೇಘ ಸೂರ್ಯಕಾಂತ್ ನ ಹೋರಾಟ, ನ್ಯಾಯ, ಪ್ರಾಮಾಣಿಕತನವನ್ನು ಮೆಚ್ಚಿ ಅವನನ್ನು ಪ್ರೀತಿಸಲು ಆರಂಭಿಸಿದ್ದಳು. ಈ ಪ್ರೀತಿ ಮೇಘಾಳನ್ನು ತನ್ನ ತಂದೆಯ ವಿರುದ್ಧವೇ ಸಿಡಿದೇಳುವಂತೆ ಮಾಡಿತ್ತು.

ಕೆಲವು ದಿನಗಳ ನಂತರ, ಆಸ್ಪತ್ರೆಯ ಮಂಚದ ಮೇಲೆ ತಲೆಗೆ ಬಿಳಿ ಪಟ್ಟಿ ಸುತ್ತಿಕೊಂಡು ಮಲಗಿದ್ದ ಸೂರ್ಯಕಾಂತ್ ನ ಪಕ್ಕದಲ್ಲಿ ಮೇಘ ಕುಳಿತಿದ್ದಳು. ಅವಳ ಕಣ್ಣುಗಳಲ್ಲಿ ನಿದ್ದೆಯಿಲ್ಲದ ಆಯಾಸವಿತ್ತಾದರೂ, ಮುಖದಲ್ಲಿ ಗೆಲುವಿನ ತೇಜಸ್ಸಿತ್ತು. ಸೂರ್ಯಕಾಂತ್ ನಿಧಾನವಾಗಿ ಕಣ್ಣು ಬಿಟ್ಟು ಅವಳ ಕೈಗಳನ್ನು ತನ್ನ ಕೈಯೊಳಗೆ ತೆಗೆದುಕೊಂಡನು. ಆಗ ಸೂರ್ಯಕಾಂತ್ ನನ್ನು ನೋಡುತ್ತಾ ಮೇಘ, ಸೂರ್ಯಕಾಂತ್, ಅಧಿಕಾರ ಅನ್ನೋದು ಮರಳಿನ ಮೇಲೆ ಬರೆದ ಹೆಸರಿದ್ದಂತೆ, ಗಾಳಿ ಬಂದರೆ ಅಳಿಸಿ ಹೋಗುತ್ತೆ. ಆದರೆ ಜನರ ಮನಸ್ಸಿನ ಮೇಲೆ ಪ್ರೀತಿಯಿಂದ ಬರೆದ ಹೆಸರು ಎಂದಿಗೂ ಅಳಿಯಲ್ಲ. ನಾನು ನನ್ನ ಅಪ್ಪನ ಮಗಳಾಗಿ ಅಲ್ಲ, ಈ ಮಣ್ಣಿನ ಮಗಳಾಗಿ ನಿನ್ನ ಜೊತೆ ನಿಂತಿದ್ದೇನೆ. ಆಗ ಸೂರ್ಯಕಾಂತ್ ಮೇಘಾಳ ಕೈಯನ್ನು ಮತ್ತಷ್ಟು ಬಿಗಿಯಾಗಿ ಹಿಡಿದು ಹೇಳಿದ. ಇವತ್ತು ನನ್ನ ಹೋರಾಟಕ್ಕೆ ಪೂರ್ಣ ವಿಜಯ ಸಿಕ್ಕಿದೆ ಮೇಘ. ಯಾಕಂದ್ರೆ ನನಗೆ ನ್ಯಾಯದ ಜೊತೆಗೆ ನಿನ್ನಂತಹ ನಿರ್ಮಲವಾದ ಪ್ರೀತಿಯೂ ಸಿಕ್ಕಿದೆ. ಅಧಿಕಾರಕ್ಕೆ ಬಗ್ಗದ ಈ ಮನುಷ್ಯ ನಿನ್ನ ಪ್ರೀತಿಗೆ ಶರಣಾಗಿದ್ದಾನೆ. ಆಗ ಮೇಘ, ಸೂರ್ಯಕಾಂತ್, ಪ್ರೀತಿ ಅಂದರೆ ಬರಿ ಅಪ್ಪುಗೆಯಲ್ಲ, ಅದು ಅನ್ಯಾಯದ ವಿರುದ್ಧ ಒಟ್ಟಾಗಿ ನಿಲ್ಲುವ ಧೈರ್ಯ. ನಮ್ಮಿಬ್ಬರ ಈ ಪ್ರೇಮ ಕಥೆ ಇತಿಹಾಸದಲ್ಲಿ ಕೇವಲ ಪ್ರೇಮಿಯಾಗಿ ಅಲ್ಲ, ಒಂದು ಕ್ರಾಂತಿಯಾಗಿ ದಾಖಲಾಗಲಿ. ಎಂದಾಗ, ಸೂರ್ಯಕಾಂತ್ ಅವಳ ಕಣ್ಣಲ್ಲಿನ ದೃಢತೆಯನ್ನು ನೋಡಿ ಬೆರಗಾದ. ಮೇಘ, ಪ್ರೀತಿ ಅಂದ್ರೆ ಎರಡು ಜೀವಗಳು ಒಂದಾಗೋದಲ್ಲ, ಎರಡು ಆದರ್ಶಗಳು ಒಂದಾಗೋದು. ಇವತ್ತು ನಾವಿಬ್ಬರು ಒಂದಾಗುತ್ತಿಲ್ಲ, ನ್ಯಾಯ ಮತ್ತು ಧೈರ್ಯ ಒಂದಾಗುತ್ತಿದೆ. ಕಾರ್ಮಿಕರ ಬೆವರಿನ ಹನಿಗಳಿಗೆ ನೀನು ಮಳೆಬಿಲ್ಲಾಗಿ ಬಂದಿದ್ದೀಯಾ. ಕೊನೆಗೂ ನ್ಯಾಯ ದಕ್ಕಿತು. ಕಾರ್ಖಾನೆಯ ಮಾಲೀಕರು ಕಾರ್ಮಿಕರ ಬೇಡಿಕೆಗಳಿಗೆ ಒಪ್ಪಿಗೆ ಸೂಚಿಸಿದರು. ಸಂಜೆ ಸೂರ್ಯಾಸ್ತದ ಸಮಯದಲ್ಲಿ ಇಬ್ಬರೂ ಮಾತನಾಡುತ್ತಿದ್ದಾಗ, ಮೇಘ, ಈಗಲಾದರೂ ನಿನಗೆ ನಿನ್ನ ಬಗ್ಗೆ ಯೋಚನೆ ಮಾಡೋಕೆ ಸಮಯ ಇದೆಯಾ? ಎಂದು ಕೇಳಿದಳು. ಅದಕ್ಕೆ ಸೂರ್ಯಕಾಂತ್, ಇದೆ ಮೇಘ... ಇಷ್ಟು ದಿನ ನಾನು ನಾನು ಮತ್ತು ಅವರು ಅಂತ ಬದುಕುತ್ತಿದ್ದೆ. ಇನ್ನು ಮುಂದೆ ನಾವು ಅಂತ ಬದುಕೋಣ. ನಿನ್ನ ಪ್ರೀತಿ ನನ್ನ ಹೋರಾಟಕ್ಕೆ ವಿಶ್ರಾಂತಿಯಲ್ಲ, ಅದು ನನ್ನ ಮುಂದಿನ ಪಯಣಕ್ಕೆ ಸ್ಫೂರ್ತಿ. ಎಂದನು ಸೂರ್ಯಕಾಂತ್. ಮೇಘ ತನ್ನ ಓದಿನ ಅನುಭವದ ಹಿನ್ನೆಲೆಯಲ್ಲಿ ಬಂಡವಾಳಶಾಹಿ ಅನ್ನೋದು ಮಂಜಿನಂತೆ ಅಧಿಕಾರದ ಬಿಸಿಲಿಗೆ ಕರಗಬಹುದು. ಆದರೆ ಕಾರ್ಮಿಕರ ಸಂಘಟನೆ ಅನ್ನೋದು ಬೆಟ್ಟದಂತೆ, ಎಂತಹ ಬಿರುಗಾಳಿ ಬಂದರೂ ಅಲುಗಾಡುವುದಿಲ್ಲ. ಆ ಬೆಟ್ಟದ ಮೇಲೆ ಅರಳಿದ ಹೂವೇ ಈ ನಮ್ಮ ಪ್ರೀತಿ. ಎಂದಾಗ ಕಿಟಕಿಯ ಹೊರಗೆ ಸೂರ್ಯ ಮೂಡುತ್ತಿದ್ದ. ಕಾರ್ಖಾನೆಯ ಸೈರನ್ ಮತ್ತೆ ಮೊಳಗಿತು. ಆದರೆ ಈ ಬಾರಿ ಆ ಧ್ವನಿಯಲ್ಲಿ ಕಾರ್ಮಿಕರ ಕಣ್ಣೀರಿರಲಿಲ್ಲ, ಬದಲಿಗೆ ಹೊಸ ಜೀವನದ ಸಂತಸವಿತ್ತು. ಗೇಟಿನ ಮುಂದೆ ಹೂವಿನ ಹಾರಗಳು ಮತ್ತು ಕೆಂಪು ಬಾವುಟಗಳು ಒಟ್ಟಿಗೆ ಹಾರಾಡುತ್ತಿದ್ದವು. ಬೆವರ ಹನಿಯು ಪ್ರೇಮದ ಧ್ವನಿಯೊಂದಿಗೆ ಬೆರೆತು ಹೊಸ ಇತಿಹಾಸವನ್ನು ಬರೆದಿತ್ತು.

**- ಕೆ.ಎನ್. ಚಿದಾನಂದ** (ನಾನಂಚಿ) ಹಾಸನ

---




## ಜೀವನದ ನಿಲ್ದಾಣದಲ್ಲಿ ನಿಂತ ಪ್ರಶ್ನೆಗಳು

ಜೀವನ ಎನ್ನುವುದು ಒಂದು ದೀರ್ಘ ಪ್ರಯಾಣ. ಈ ಪ್ರಯಾಣದಲ್ಲಿ ನಾವು ಅನೇಕ ಜನರನ್ನು ಭೇಟಿಯಾಗುತ್ತೇವೆ, ಅನೇಕ ಅನುಭವಗಳನ್ನು ಸಂಗ್ರಹಿಸುತ್ತೇವೆ, ಸಂತೋಷದ ಕ್ಷಣಗಳನ್ನು ಆಚರಿಸುತ್ತೇವೆ ಮತ್ತು ದುಃಖದ ಕ್ಷಣಗಳನ್ನು ಸಹಿಸಿಕೊಳ್ಳುತ್ತೇವೆ. ಆದರೆ ಈ ಎಲ್ಲದರ ನಡುವೆ ಕೆಲವೊಮ್ಮೆ ನಮ್ಮ ಜೀವನದ ನಿಲ್ದಾಣದಲ್ಲಿ ಕೆಲವು ಪ್ರಶ್ನೆಗಳು ಬಂದು ನಿಂತುಕೊಳ್ಳುತ್ತವೆ. ಅವುಗಳಿಗೆ ಉತ್ತರ ಹುಡುಕುತ್ತಾ ನಾವು ದಿನಗಳನ್ನು, ತಿಂಗಳುಗಳನ್ನು, ಕೆಲವೊಮ್ಮೆ ವರ್ಷಗಳನ್ನೇ ಕಳೆಯುತ್ತೇವೆ.

ಪ್ರತಿಯೊಬ್ಬ ಮನುಷ್ಯನ ಹೃದಯದ ಆಳದಲ್ಲಿ ಯಾರಿಗೂ ಹೇಳಲಾಗದ ಕೆಲವು ನೋವುಗಳು ಇರುತ್ತವೆ. ಹೊರಗಿನಿಂದ ನೋಡಿದಾಗ ಅವನು ನಗುತ್ತಿರುವಂತೆ ಕಾಣಬಹುದು. ಎಲ್ಲರೊಂದಿಗೆ ಮಾತನಾಡುತ್ತಾ, ಕೆಲಸ ಮಾಡುತ್ತಾ, ಬದುಕನ್ನು ಆನಂದಿಸುತ್ತಿರುವಂತೆ ತೋರುತ್ತಾನೆ. ಆದರೆ ಅವನ ಮನಸ್ಸಿನ ಒಳಗೆ ಉತ್ತರ ಸಿಗದ ಪ್ರಶ್ನೆಗಳ ಸುಂಟರಗಾಳಿ ಬೀಸುತ್ತಿರಬಹುದು. ಕೆಲವೊಂದು ಪ್ರಶ್ನೆಗಳು ಕೆಲವೊಮ್ಮೆ ಮನಸ್ಸಿನ ಬಾಗಿಲು ತಟ್ಟುವುದಿಲ್ಲ; ಅವು ಬಾಗಿಲನ್ನೇ ಒಡೆದು ಒಳಗೆ ಪ್ರವೇಶಿಸುತ್ತವೆ.

ಎಲ್ಲಾ ಸಮಸ್ಯೆಗಳನ್ನು ಎಲ್ಲರಿಗೂ ಹೇಳಲು ಸಾಧ್ಯವಿಲ್ಲ. ಕೆಲವು ಸಮಸ್ಯೆಗಳು ತುಂಬಾ ವೈಯಕ್ತಿಕವಾಗಿರುತ್ತವೆ. ಕೆಲವು ನೋವುಗಳನ್ನು ಮಾತಿನಲ್ಲಿ ವಿವರಿಸಲು ಸಾಧ್ಯವಾಗುವುದಿಲ್ಲ.



ಕೆಲವೊಮ್ಮೆ ನಾವು ನಮ್ಮ ಆತ್ಮೀಯರ ಬಳಿಗೆ ಹೋಗಿ ನಮ್ಮ ಸಂಕಟವನ್ನು ಹೇಳಿದರೂ ಅವರು ನೀಡುವ ಉತ್ತರಗಳು ನಮ್ಮ ಪ್ರಶ್ನೆಗಳ ಆಳವನ್ನು ಮುಟ್ಟುವುದೇ ಇಲ್ಲ. ಕೆಲವೊಂದು ಮಾತುಗಳು ಸಾಂತ್ವನ ನೀಡುವ ಉದ್ದೇಶದಿಂದ ಬಂದರೂ, ಕೆಲವೊಮ್ಮೆ ಗಾಯದ ಆಳವನ್ನು ಅರ್ಥಮಾಡಿಕೊಳ್ಳುವುದಿಲ್ಲ. ನೋವಿನ ಸಮುದ್ರದಲ್ಲಿ ಮುಳುಗುತ್ತಿರುವವನಿಗೆ ಈಜು ಎಂದು ಹೇಳಿದಂತಾಗುತ್ತದೆ.

ಮನಸ್ಸಿನ ತಲ್ಲಣವು ಹೊರಗಿನಿಂದ ಕಾಣುವುದಿಲ್ಲ. ಅದು ನಿಶ್ಶಬ್ದವಾಗಿ ಒಳಗೆ ಬೆಳೆಯುತ್ತದೆ. ರಾತ್ರಿ ಎಲ್ಲರೂ ಮಲಗಿದ ನಂತರ ಮಾತ್ರ ಅದರ ಧ್ವನಿ ಸ್ಪಷ್ಟವಾಗಿ ಕೇಳಿಸುತ್ತದೆ. ಹಗಲಿನಲ್ಲಿ ಕೆಲಸದ ಒತ್ತಡ, ಜನರ ಮಾತು, ಜೀವನದ ಓಟ ಇವುಗಳ ನಡುವೆ ಮರೆತುಹೋಗುವ ಪ್ರಶ್ನೆಗಳು, ರಾತ್ರಿಯ ನಿಶ್ಶಬ್ದದಲ್ಲಿ ಮತ್ತೆ ಎದ್ದು ನಿಲ್ಲುತ್ತವೆ.

ಕೆಲವೊಮ್ಮೆ ಮನುಷ್ಯನು ತನ್ನೊಂದಿಗೆ ತಾನೇ ಹೋರಾಡುತ್ತಾನೆ. ಒಂದು ಕಡೆ ಆಶೆಯ ಧ್ವನಿ ಕೇಳಿಸುತ್ತದೆ. ಮತ್ತೊಂದು ಕಡೆ ನಿರಾಶೆಯ ಧ್ವನಿ ಪ್ರತಿಧ್ವನಿಸುತ್ತದೆ. ಯಾವ ಧ್ವನಿಯನ್ನು ಕೇಳಬೇಕು ಎಂಬ ಗೊಂದಲದಲ್ಲಿ ಮನಸ್ಸು ತಲ್ಲಣಗೊಳ್ಳುತ್ತದೆ.

ಒಬ್ಬ ವಿದ್ಯಾರ್ಥಿ ತನ್ನ ಶ್ರಮಕ್ಕೆ ತಕ್ಕ ಫಲ ಸಿಗದಾಗ ಇಂತಹ ಪ್ರಶ್ನೆಗಳನ್ನು ಎದುರಿಸುತ್ತಾನೆ. ಒಬ್ಬ ರೈತನು ತನ್ನ ಬೆಳೆ ಹಾಳಾದಾಗ ಉತ್ತರ ಸಿಗದ ಪ್ರಶ್ನೆಗಳೊಂದಿಗೆ ಬದುಕುತ್ತಾನೆ. ಒಬ್ಬ ತಾಯಿ ತನ್ನ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸುತ್ತಾಳೆ. ಒಬ್ಬ ತಂದೆ ತನ್ನ ಕುಟುಂಬದ ಹೊಣೆಗಾರಿಕೆಯ ಭಾರದಲ್ಲಿ ಮೌನವಾಗಿ ಕಣ್ಣೀರು ಸುರಿಸುತ್ತಾನೆ. ಒಬ್ಬ ಯುವಕ ತನ್ನ ಕನಸುಗಳು ಮುರಿದಾಗ ದಿಕ್ಕುತೋಚದೆ ನಿಂತುಕೊಳ್ಳುತ್ತಾನೆ.

ಆಶ್ಚರ್ಯವೆಂದರೆ, ಜಗತ್ತಿನಲ್ಲಿರುವ ಬಹುತೇಕ ಜನರು ಇದೇ ರೀತಿಯ ಪ್ರಶ್ನೆಗಳೊಂದಿಗೆ ಬದುಕುತ್ತಿದ್ದಾರೆ. ಆದರೆ ಪ್ರತಿಯೊಬ್ಬರೂ ತಮ್ಮ ತಮ್ಮ ಮುಖದ ಹಿಂದೆ ಒಂದು ಮುಖವಾಡ ಧರಿಸಿದ್ದಾರೆ. ಆ ಮುಖವಾಡದ ಹಿಂದೆ ಅಡಗಿರುವ ನೋವನ್ನು ಯಾರೂ ಕಾಣುವುದಿಲ್ಲ.

ಕೆಲವು ಪ್ರಶ್ನೆಗಳಿಗೆ ಉತ್ತರಗಳು ತಕ್ಷಣ ಸಿಗುವುದಿಲ್ಲ. ಕೆಲವೊಮ್ಮೆ ಜೀವನವೇ ಅದರ ಉತ್ತರವನ್ನು ವರ್ಷಗಳ ನಂತರ ನೀಡುತ್ತದೆ. ಇಂದು ನಮಗೆ ಅನ್ಯಾಯವೆಂದು ತೋರುವ ಘಟನೆ, ನಾಳೆ ಒಂದು ದೊಡ್ಡ ಪಾಠವಾಗಿ ಪರಿಣಮಿಸಬಹುದು. ಇಂದು ಮುಚ್ಚಿದ ಬಾಗಿಲು, ನಾಳೆ ಉತ್ತಮ ದಾರಿಯನ್ನು ತೋರಿಸಬಹುದು.

ಆದರೆ ಆ ಕಾಯುವ ಅವಧಿಯೇ ತುಂಬಾ ಕಷ್ಟಕರ. ಉತ್ತರಕ್ಕಾಗಿ ಕಾಯುವುದು ಸುಲಭದ ಕೆಲಸವಲ್ಲ. ಆ ಸಮಯದಲ್ಲಿ ಮನಸ್ಸು ಸಾವಿರಾರು ಊಹೆಗಳನ್ನು ಮಾಡುತ್ತದೆ. ಭಯಗಳು ಹುಟ್ಟಿಕೊಳ್ಳುತ್ತವೆ. ಆತಂಕಗಳು ಬೆಳೆಯುತ್ತವೆ. ಆತ್ಮವಿಶ್ವಾಸ ಕುಗ್ಗುತ್ತದೆ.

ಅಂತಹ ಸಂದರ್ಭಗಳಲ್ಲಿ ಮನುಷ್ಯನು ನೆನಪಿಡಬೇಕಾದ ಒಂದು ಸತ್ಯವಿದೆ. ಪ್ರತಿಯೊಂದು ಪ್ರಶ್ನೆಗೆ ಉತ್ತರ ಇರಲೇಬೇಕು ಎನ್ನುವುದಿಲ್ಲ. ಕೆಲವು ಪ್ರಶ್ನೆಗಳು ಉತ್ತರಕ್ಕಾಗಿ ಅಲ್ಲ, ನಮ್ಮನ್ನು ಹೆಚ್ಚು ಪ್ರಬುದ್ಧರನ್ನಾಗಿ ಮಾಡಲು ಬರುತ್ತವೆ. ಕೆಲವು ನೋವುಗಳು ನಮ್ಮನ್ನು ಮುರಿಯಲು ಅಲ್ಲ, ನಮ್ಮೊಳಗಿನ ಶಕ್ತಿಯನ್ನು ಪರಿಚಯಿಸಲು ಬರುತ್ತವೆ.

ಜೀವನದ ನಿಲ್ದಾಣದಲ್ಲಿ ನಿಂತಿರುವ ಪ್ರಶ್ನೆಗಳು ಕೆಲವೊಮ್ಮೆ ರೈಲಿನಂತೆ ಬರುತ್ತವೆ ಮತ್ತು ಹೋಗುತ್ತವೆ. ಆದರೆ ನಾವು ನಿಲ್ದಾಣವಾಗಿಯೇ ಉಳಿಯಬೇಕು. ಕ್ಷಣಿಕವಾದ ನೋವುಗಳಿಗೆ ನಮ್ಮ ಇಡೀ ಬದುಕನ್ನು ಒಪ್ಪಿಸಬಾರದು.

ಯಾರಿಗೂ ಹೇಳಲಾಗದ ಸಮಸ್ಯೆಗಳು ನಿಮ್ಮಲ್ಲಿದ್ದರೆ, ನೀವು ಒಬ್ಬರೇ ಅಲ್ಲ ಎಂಬುದನ್ನು ನೆನಪಿಡಿ. ಜಗತ್ತಿನ ಪ್ರತಿಯೊಂದು ಹೃದಯವೂ ಯಾವುದೋ ಒಂದು ಮೌನ ಯುದ್ಧವನ್ನು ಹೋರಾಡುತ್ತಿದೆ. ಕೆಲವರು ಅದನ್ನು ಮಾತಿನಲ್ಲಿ ಹೇಳುತ್ತಾರೆ. ಕೆಲವರು ಕಣ್ಣೀರಿನಲ್ಲಿ ಹೇಳುತ್ತಾರೆ. ಇನ್ನೂ ಕೆಲವರು ಮೌನದಲ್ಲೇ ಬದುಕುತ್ತಾರೆ.

ಆದರೆ ಮೌನ ಎಂದರೆ ಸೋಲು ಅಲ್ಲ. ಪ್ರಶ್ನೆಗಳಿರುವುದು ದುರ್ಬಲತೆಯಲ್ಲ. ಉತ್ತರ ಹುಡುಕುವುದು ಜೀವನದ ಒಂದು ಭಾಗ. ಕೆಲವೊಮ್ಮೆ ಉತ್ತರ ಸಿಗದಿದ್ದರೂ ಮುಂದೆ ಸಾಗುವುದು ಬದುಕಿನ ದೊಡ್ಡ ಧೈರ್ಯ.

ಕೊನೆಗೆ, ಜೀವನದ ನಿಲ್ದಾಣದಲ್ಲಿ ನಿಂತಿರುವ ಪ್ರತಿಯೊಂದು ಪ್ರಶ್ನೆಯೂ ನಮಗೆ ಒಂದು ಪಾಠ ಕಲಿಸುತ್ತದೆ. ಕೆಲವು ಪ್ರಶ್ನೆಗಳು ಉತ್ತರಗಳನ್ನು ನೀಡುತ್ತವೆ. ಕೆಲವು ಪ್ರಶ್ನೆಗಳು ಅನುಭವಗಳನ್ನು ನೀಡುತ್ತವೆ. ಇನ್ನೂ ಕೆಲವು ಪ್ರಶ್ನೆಗಳು ನಮ್ಮನ್ನು ನಾವು ಅರಿತುಕೊಳ್ಳುವ ಅವಕಾಶವನ್ನು ನೀಡುತ್ತವೆ.

ಹೀಗಾಗಿ, ಜೀವನದ ನಿಲ್ದಾಣದಲ್ಲಿ ಇಂದು ನಿಮ್ಮ ಮುಂದೆ ಎಷ್ಟೇ ಪ್ರಶ್ನೆಗಳು ನಿಂತಿದ್ದರೂ, ಅವುಗಳನ್ನು ಹೆದರಬೇಡಿ. ಏಕೆಂದರೆ ಕೆಲವೊಮ್ಮೆ ಉತ್ತರಗಳಿಗಿಂತಲೂ ಪ್ರಶ್ನೆಗಳೇ ನಮ್ಮನ್ನು ಉತ್ತಮ ಮನುಷ್ಯರನ್ನಾಗಿ ರೂಪಿಸುತ್ತವೆ. ಮತ್ತು ಬದುಕಿನ ಅತ್ಯಂತ ಸುಂದರ ಸತ್ಯವೆಂದರೆ ಎಲ್ಲ ಕತ್ತಲೆ ರಾತ್ರಿಗಳ ನಂತರವೂ ಒಂದು ಬೆಳಗು ಖಂಡಿತವಾಗಿಯೂ ಉದಯಿಸುತ್ತದೆ.

**- ಶ್ರೀ ಸುಬ್ರಹ್ಮಣ್ಯ** ನಾಯಕ್

---

## ನಿಯಮಗಳ ಬೇಲಿ ಮುರಿದು..



ಬಟ್ಟೆಗಳಾಯಿತು ತುಂಡ ನಾಚಿಕೆ ಎಲ್ಲಿಂದ ಬರುತ್ತೆ ಕಳೆದ ತಿಂಗಳು ಪೂರ ಈ ಸಾಲನ್ನು ಇಟ್ಕೊಂಡು ಇನ್ಸ್ಟಾಗ್ರಾಮ್ ಮತ್ತು ಫೇಸ್ ಬುಕ್ನಲ್ಲಿ ಟ್ರೋಲ್‌ಗಳನ್ನು ಬಹಳಷ್ಟು ನೋಡ್ತಾ ಈ ಬಗ್ಗೆ ಬರಿಬೇಕು ಅಂದ್ಕೊಂತಾ ಇದ್ದೆ. ಆದ್ರೆ ಆಗಿರಲಿಲ್ಲ. ಇವತ್ತ್ಯಾಕೋ ಬರೆಯಲೇಬೇಕು ಅನ್ನಿಸ್ತು. ಹಾಗಾಗಿ ಬರ್ದೆ.

ಅಲ್ಲ ಎಲ್ಲರೂ ಹೆಣ್ಣಿನ ಬಟ್ಟೆ ಸುತ್ತಲೇ ಯಾಕೆ ಗಿರ್ಕಿ ಹೊಡ್ತೀರೋ ಅರ್ಥ ಆಗಲಿಲ್ಲ. ಒಬ್ಬ ಗಂಡಸು ತುಂಡು ಉಡುಗೆ ಹಾಕೋದನ್ನ ನೋಡಿ ಮಾತಾಡ್ತಾನೆ ಅಂದ್ರೆ ಅವನ ಚಪ್ಲ ತೀರಿಸ್ಕೋತಾನೆ ಅಂದ್ಕೋಬಹುದು. ಎಲ್ಲರು ಅಲ್ಲದಿದ್ದರು ಬಹುಪಾಲು ಗಂಡಸರು ಹೆಣ್ಣುಗಳನ್ನು ನೋಡುವ ರೀತಿಯೇ ಹಾಗಿರುತ್ತೆ. ಯಾಕೆಂದರೆ ಅವರ ದೃಷ್ಟಿಯಲ್ಲಿ ಹೆಣ್ಣಿನ ದೇಹ ಅಷ್ಟೇ. ಅವರಿಗೆ ನಾವು ಬಟ್ಟೆ ತೊಟ್ಟರು ಒಂದೇ ತೊಡದಿದ್ದರೂ ಒಂದೇ. ನೋಡೋ ಕಣ್ಣುಗಳಿಗೆ ನಾವು ಮೈ ಪೂರ ಮುಚ್ಚಿದ್ರು ಬೆತ್ತಲಾಗಿಯೇ ಕಾಣಿಸ್ತೀವಿ. ಹಾಗಾಗಿ ನಾವು ಮೈ ಪೂರ ಮುಚ್ಚಿಕೊಳ್ಳೋದರಿಂದಾಗಲಿ. ತುಂಡು ಬಟ್ಟೆಯಾಗಲಿ ಹಾಕೊಳ್ಳೋದರಿಂದ ಏನೂ ವ್ಯತ್ಯಾಸ ಅನ್ಸಲ್ಲ ಅನ್ಸುತ್ತೆ.

ಇನ್ನು ಹೆಣ್ಣುಗಳೇ ಹೆಣ್ಣುಗಳ ಬಟ್ಟೆ ಧರಿಸುವಿಕೆಯ ಬಗ್ಗೆ ಮಾತಾಡ್ತಾರೆ ಅಂದಾಗ ಗಂಭೀರವಾಗಿ ಯೋಚಿಸಬೇಕಾಗುತ್ತೆ. ಆಕೆ ಏನ್ ಹೇಳ್ತಾಳೆ ಮತ್ತೊಮ್ಮೆ ಕೇಳಿ ಕಪಡೆ ಹೋ ಗಯೆ ಛೋಟೆ ಶರ್ಮ್ ಕಹಾ ಸೆ ಆಯೆ (ಬಟ್ಟೆಯಾಯಿತು ಗಿಡ್ಡ ನಾಚಿಕೆ ಎಲ್ಲಿಂದ ಬರಬೇಕು).

ಒಬ್ಬ ಹೆಣ್ಣಾಗಿ ಆಕೆ ಯಾಕೆ ಈ ದಿಸೆಯಲ್ಲಿ ಯೋಚಿಸ್ತಾಳೆ ಅಂದ್ರೆ, ಆಕೆ ಮೇಲೆ ಸಮಾಜ, ಸಾಮಾಜಿಕ ವ್ಯವಸ್ಥೆ, ಸುತ್ತಮುತ್ತಲಿನ ಪರಿಸರ ಆಕೆಯ ಮೇಲೆ ಯಾವ ರೀತಿಯ ಪ್ರಭಾವ ಬೀರಿರಬಹುದು ಅಂತ ನಾವು ಯೋಚಿಸಬೇಕಾಗುತ್ತೆ.

ಹೆಣ್ಣಿನ ಮೇಲೆ ಲೈಂಗಿಕ ಶೋಷಣೆಯಾದ್ರೆ, ರೇಪಾದ್ರೆ, ಯಾರಾದರೂ ರೇಗಿಸಿದ್ರೆ, ಚುಡಾಯಿಸಿದ್ರೆ ಎಲ್ಲದಕ್ಕೂ ಅವಳು ಹಾಕೋ ಬಟ್ಟೆಯೇ ಕಾರಣ. ಹೆಣ್ಣು ಹಾಕೋ ಬಟ್ಟೆಯಲ್ಲಿ ಮಾನ ಮರ್ಯಾದೆ ಇದೆ ಅಂತ ಹೇಳಿದ್ದು ಯಾರು. ಹಾಗೊಂದು ವೇಳೆ ಆಕೆ ಹಾಗೆ ಹೇಳ್ತಾ ಇದ್ದಾಳೆ ಅಂದ್ರೆ, ಅದು ಆಕೆ ಮಾತಾಗಿರಲು ಹೇಗೆ ಸಾಧ್ಯ.

ಇದೆಲ್ಲವನ್ನು ಮೊದಲು ಮನೆಯೊಳಗಿನ ಮತ್ತು ಹೊರಗಿನ ಪರಿಸರ ತುಂಬುತ್ತೆ. ನಾವೆಲ್ಲ ಚಿಕ್ಕವರಿದ್ದಾಗ ಅಂಗಾತ ಮಲಗ್ಬೇಡ, ಮಂಡಿ ಮೇಲೆ ಮಡಚಿ ಮಲಗ್ಬೇಡ. ಲಂಗ ಕಾಲು ತನಕ ಎಳ್ಕೋ ಮಗ್ಗುಲಾಗಿ ಮಲಗು ಹಾಗೆ ಹೀಗೆ ಅಂತ ಹೇಳೋದೆಲ್ಲ ಹೆಣ್ಣುಗಳಿಗೆ ಮಾತ್ರ. ಗಂಡುಗಳಿಗೆ ಹೇಗಾದ್ರು ಮಲಗಲಿ, ಹೇಗಾದ್ರು ಇರಲಿ ಕೇಳೋರಿಲ್ಲ, ಷರತ್ತು, ನಿಯಮಗಳೇನಿದ್ದರು ಹೆಣ್ಣುಗಳಿಗೆ ಮಾತ್ರ. ಹಾಗೆ ಮನೆಯವರ, ಮನೆತನದ ಜೊತೆ ಅಪ್ಪ, ಅಣ್ಣ, ತಮ್ಮಂದಿರ ಮರ್ಯಾದೆಯ ಗುತ್ತಿಗೆ ತಗೊಂಡಿರೋದು ನಾವು ಹೆಣ್ಣುಗಳೇ ಕಣ್ರೀ

ಅಲ್ನೋಡು ಅದೆಷ್ಟು ಟ್ರಾನ್ಸ್ಪರೆಂಟಾಗಿ ಬ್ಲೌಸ್ ಹಾಕಿದ್ದಾಳೆ ಬ್ರಾ ಮತ್ತು ಸ್ಟ್ರಾಪ್ ಕಾಣಿಸ್ತಿದೆ. (ಹೆಣ್ಣುಗಳು ಬ್ರಾ ಹಾಕೋದು ಯಾರಿಗೂ ತಿಳಿಯದಿರುವ ರಹಸ್ಯವೇನು ಅಲ್ಲ ಅಲ್ವಾ). ಹೇ ಅವಳು ಹಾಗೆ ಯಾವಾಗಲೂ ಸೊಂಟ ಕಾಣಿಸೋ ತರನೇ ಸೀರೆ ಉಡ್ತಾಳೆ. ಇನ್ನು ಸ್ಲೀವ್ಲೆಸ್ ಬ್ಲೌಸ್ ಹಾಕಿದ್ರೆ ನೋಡು ತೋಳುಗಳು ಕಾಣಿಸ್ಲಿ ಅಂತ. ಮಂಡಿ ಕಾಣಿಸುವಂತೆ, ತೊಡೆ ಕಾಣಿಸುವಂತೆ ಬಟ್ಟೆ ಹಾಕೊಂಡಿದ್ದಾಳೆ.


ಅಷ್ಟಕ್ಕೂ ನಮ್ಮ ನೈತಿಕತೆ ಇರೋದು ನಮ್ಮ ವಿಚಾರಗಳಲ್ಲಾ ಅಥವಾ ನಾವು ತೊಡುವ ಬಟ್ಟೆಗಳಲ್ಲಾ..? ನಮ್ಮ ಬಟ್ಟೆಗಳಲ್ಲಿ ನಮ್ಮ ಮಾನ ಮರ್ಯಾದೆ ಯಾವಾಗ ಬಂದು ಸೇರ್ಕೊಂತು ಗೊತ್ತಿಲ್ಲ. ನಾವೆಲ್ಲಾ ಒಂದು ರೀತಿ ವ್ಯವಸ್ಥೆಯ ಬಲಿಪಶುಗಳು ಅಷ್ಟೇ. ಮೌನವಾಗಿ ಎಲ್ಲವನ್ನು ಸಹಿಸ್ಕೊಂಡು ಹೋದ್ರೆ ನಾವು ಮಾನವಂತ್ರು, ಸಂಸ್ಕಾರವಂತ್ರು. ಯಾವಾಗ ಎಲ್ಲವನ್ನು ಪ್ರಶ್ನಿಸಿ ವಿರೋಧಿಸಿ ನಮ್ಮಿಚ್ಚೆಯಂತೆ ಬದುಕಿದ್ರೆ, ಮಾನಗೆಟ್ಟವರು, ಸಂಸ್ಕಾರ ಇಲ್ಲದವರು. ಧ್ವನಿ ಏರಿಸಿ ಮಾತಾಡಿದ್ರೆ, ಜೋರು, ಗಯ್ಯಾಳಿ ಅಷ್ಟೇ. ಇದೆಲ್ಲಾ ಪಿತೃಪ್ರಧಾನ ವ್ಯವಸ್ಥೆಯ ಪಿತೂರಿಗಳು. ಹೆಣ್ಣುಗಳ ವಿರುದ್ಧ ಹೆಣ್ಣುಗಳನ್ನೇ ಅಸ್ತ್ರವಾಗಿಸುವ ತಂತ್ರಗಾರಿಕೆಗಳು. ಹೆಣ್ಣುಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ಹುನ್ನಾರ.

ವ್ಯವಸ್ಥೆ ಬದಲಾಗ್ತಿದೆ. ಜನರ ಜೀವನ ಶೈಲಿ ಬದಲಾಗ್ತಿದೆ. ಹೆಣ್ಣು ಮಕ್ಕಳು ವಿದ್ಯಾವಂತರಾಗ್ತಾ ಇದ್ದಾರೆ. ಯಾವುದು ಸರಿ ಯಾವುದು ತಪ್ಪು. ಯಾವುದು ನಮಗೆ ಒಳಿತು, ಯಾವುದು ಕೆಡುಕು. ಯಾವುದು ನಿಯಂತ್ರಿಸುತ್ತೆ, ಯಾವುದು ಸ್ವಾತಂತ್ರ್ಯ ಎಲ್ಲವೂ ತಿಳಿದಿದೆ. ನಾವು ತೊಡುವ ಬಟ್ಟೆಯಲ್ಲಿ ನಮ್ಮ ಮಾನ, ಮರ್ಯಾದೆ, ಸಂಸ್ಕಾರ ಯಾವುದು ಇಲ್ಲ. ಸೋ ಆರಾಮಾಗಿ ನಮ್ಮಿಷ್ಟದ ಬಟ್ಟೆ ಹಾಕೊಂಡು ಆರಾಮಾಗಿರೋಣ.

**- ಮಂಜುಳ** ಕಿರುಗಾವಲು

# ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಗೆ ಭಾರತ ತಂಡ

## ಕೊಹ್ಲಿ, ಬೂಮ್ರಾ, ಅಕ್ಷರ್‌ಗೆ ಸ್ಥಾನ | ಯಶಸ್ವಿ ಜೈಸ್ವಾಲ್‌ಗೆ ಕೊಕ್



• ಪ್ರಜೋದಯ ವರದಿ

**ನವದೆಹಲಿ:** ಮುಂದಿನ ತಿಂಗಳು (ಜುಲೈ) ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಮೂರು ಪಂದ್ಯಗಳ ಏಕದಿನ ಸರಣಿಗೆ 15 ಸದಸ್ಯರನ್ನೊಳಗೊಂಡ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಈ ತಂಡದಲ್ಲಿ ವಿರಾಟ್ ಕೊಹ್ಲಿ ಸ್ಥಾನ ಪಡೆದಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ 2026ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಪ್ರಶಸ್ತಿ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ ಬಳಿಕ, ವಿರಾಟ್ ಕೊಹ್ಲಿ ಅವರು ಮಂಡಿರಜ್ಜು ಗಾಯದಿಂದ ಬಳಲುತ್ತಿದ್ದರು. ಈ ಗಾಯದ ಕಾರಣದಿಂದಾಗಿ ಅವರು ಇತ್ತೀಚೆಗೆ ಮುಕ್ತಾಯಗೊಂಡ ಅಫ್ಘಾನಿಸ್ತಾನ ವಿರುದ್ಧದ 3 ಪಂದ್ಯಗಳ ಏಕದಿನ ಸರಣಿಯಿಂದ ಹೊರಗುಳಿದಿದ್ದರು.

ಆಯ್ಕೆ ಸಮಿತಿ ಘೋಷಿಸಿರುವ ಶುಭಮನ್ ಗಿಲ್ ನಾಯಕತ್ವದ 15 ಸದಸ್ಯರನ್ನೊಳಗೊಂಡ ಭಾರತ ತಂಡದಲ್ಲಿ ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರನ್ನು ಕೈಬಿಟ್ಟು ವಿರಾಟ್ ಕೊಹ್ಲಿ ಅವರಿಗೆ ಮಣೆ ಹಾಕಲಾಗಿದೆ. ಉಳಿದಂತೆ ಅಫ್ಘಾನಿಸ್ತಾನ ಸರಣಿಗೆ ಆಯ್ಕೆ ಮಾಡಲಾದ ತಂಡವನ್ನು ಉಳಿಸಿಕೊಂಡಿದೆ.

ಅಫ್ಘಾನಿಸ್ತಾನ ವಿರುದ್ಧದ ಸರಣಿಯ ಕೊನೆಯ ಪಂದ್ಯದಲ್ಲಿ ಯಶಸ್ವಿ ಜೈಸ್ವಾಲ್ ಆಕರ್ಷಕ ಶತಕ ಸಿಡಿಸಿ ಮಿಂಚಿದ್ದರು. ಮೊದಲ ಪ್ರಾಶಸ್ತ್ಯದ ಆಟಗಾರ ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿದರೆ, ಬದಲಿ ಆಟಗಾರ ಅವರಿಗೆ ಜಾಗ ಮಾಡಿಕೊಡಬೇಕೆಂಬ ನಿಯಮವನ್ನು ಬಿಸಿಸಿಐ ಆಯ್ಕೆ ಸಮಿತಿ ಮಾಡಿದಂತಿದೆ.

ಕೆಲಸದ ಹೊರೆ ನಿರ್ವಹಣೆಗಾಗಿ ವಿಶ್ರಾಂತಿ ಪಡೆದಿದ್ದ ಅನುಭವಿ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ತಂಡಕ್ಕೆ ಮರಳಿದ್ದಾರೆ. ಅನುಭವಿ ಆಲ್‌ರೌಂಡರ್ ಅಕ್ಷರ್ ಪಟೇಲ್ ಕೂಡ ಸ್ಪಿನ್ನರ್ ಹರ್ಷ ದುಬೆ ಬದಲಿಗೆ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಜುಲೈ 14 ರಂದು ಎಡ್ಜ್‌ಬಾಸ್ಟನ್, ಜುಲೈ 16ರಂದು ಸೋಫಿಯಾ ಗಾರ್ಡನ್ ಮತ್ತು ಜುಲೈ 19ರಂದು ಲಾರ್ಡ್ಸ್‌ನಲ್ಲಿ ಮೂರು ಏಕದಿನ ಪಂದ್ಯಗಳನ್ನು ಆಡಲಿದೆ.

ಭಾರತ ಏಕದಿನ ತಂಡ

ಶುಭಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ (ಉಪನಾಯಕ), ಕೆ.ಎಲ್.ರಾಹುಲ್



(ವಿಕೆಟ್ ಕೀಪರ್), ಇಶಾನ್ ಕಿಶನ್ (ವಿಕೆಟ್), ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ನಿತೀಶ್ ಕುಮಾರ್ ರೆಡ್ಡಿ, ಕುಲದೀಪ ಯಾದವ್, ಜಸ್‌ಪ್ರೀತ್ ಬೂಮ್ರಾ, ಹರ್ಷಿತ್ ರಾಣಾ, ಪ್ರಸಿದ್ಧ ಕೃಷ್ಣ, ಗುರ್ನೂರ್ ಬ್ರಾರ್, ಅರ್ಷದೀಪ ಸಿಂಗ್ ಸ್ಥಾನ ಪಡೆದಿದ್ದಾರೆ.

# ವಿಶ್ವಕ್ಕೆ ಯೋಗ ಪರಿಚಯಿಸಿದ್ದು ಭಾರತ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಯೋಗ ಪದ್ಧತಿಯನ್ನು ವಿಶ್ವಕ್ಕೆ ಪರಿಚಯಿಸಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕು ಆಡಳಿತ ಹಾಗು ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಭಾನುವಾರ ಪಟ್ಟಣದಲ್ಲಿ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಭಾರತದಲ್ಲಿ ಯೋಗಕ್ಕೆ ಆಧ್ಯಾತ್ಮಿಕ ಸ್ಪರ್ಶ ಕಲ್ಪಿಸಲಾಗಿದೆ. ವಿದೇಶಗಳಲ್ಲಿ ದೈಹಿಕ ಸದೃಢತೆಗಾಗಿ ಅಳವಡಿಸಿಕೊಳ್ಳಲಾಗಿದೆ. ಪತಂಜಲಿ ಮಹರ್ಷಿಗಳು ಪರಿಚಯಿಸಿದ ಯೋಗ ವಿಶ್ವ ಮಾನ್ಯತೆ ಪಡೆದಿರುವುದು ಭಾರತೀಯರ ಹೆಮ್ಮೆ ಎಂದರು.

ಆರೋಗ್ಯ ಕಾಪಾಡಿಕೊಳ್ಳಲು ಯೋಗ, ಧ್ಯಾನ, ಪ್ರಾಣಾಯಾಮ ನೆರವಾಗುತ್ತದೆ. ಸಮಾಜದ ಸ್ವಾಸ್ಥ್ಯಕ್ಕೆ ಯೋಗ ಅಗತ್ಯವಿದೆ. ದಿನಕ್ಕೆ ಒಂದು ಗಂಟೆಯಾದರೂ ಈ ಚಟುವಟಿಕೆಗೆ ಮೀಸಲಿರಬೇಕೆಂದರು.

ರಾಷ್ಟ್ರ ಪರಿಸರ ಪ್ರಶಸ್ತಿ ಪುರಸ್ಕೃತ ಸಿ.ಎನ್.ಅಶೋಕ್ ಅವರು ಯೋಗ ತರಬೇತಿ ನೀಡುವ ಮೂಲಕ ಹಲವರ



ಆರೋಗ್ಯ ಸದೃಢತೆಗೆ ಕಾರಣರಾಗಿದ್ದಾರೆ. ಅವರ ಸೇವಾ ಚಟುವಟಿಕೆಗಳು ಹೀಗೆಯೇ ಮುಂದುವರಿಯಲಿ ಎಂದು ಶುಭ ಹಾರೈಸಿದರು. 500ಕ್ಕೂ ಹೆಚ್ಚು ಮಂದಿ ಸಾಮೂಹಿಕ ಯೋಗಭ್ಯಾಸದಲ್ಲಿ ತೊಡಗಿದ್ದರು.

ತಾಲ್ಲೂಕು ಜೆಎಂಎಫ್‌ಸಿ ನ್ಯಾಯಾಲಯದ 4ನೇ ಹೆಚ್ಚುವರಿ ನ್ಯಾಯಾಧೀಶರಾದ ಎಂ.ಎಸ್. ಕಲ್ಪನಾ ಅವರು ಮಾತನಾಡಿ, ದೇಹ, ಆತ್ಮ, ಮನಸ್ಸು ಸಂಯೋಗದ ಜೀವನ ಕ್ರಮವೇ ಯೋಗ. ಏಕಾಗ್ರತೆ ಹಾಗೂ ಒತ್ತಡ ಕಡಿಮೆ ಮಾಡಿಕೊಳ್ಳಲು, ಧ್ಯಾನ-ಯೋಗ, ಪ್ರಾಣಾಯಾಮದ ಅಗತ್ಯವಿದೆ.

ಸಿ.ಎನ್.ಅಶೋಕ್, ರೇಖಾ ರಾಣಿ ಯೋಗ ತರಬೇತಿ ನೀಡಿದರು.

ನ್ಯಾಯಾಧೀಶ ಹೆಚ್.ಕೆ.ನವೀನ್, ಅಂತಾರಾಷ್ಟ್ರೀಯ ಬಾಲ ಯೋಗ ಪಟು ಋತ್ವಿ ಪೂರ್ಣಿಮಾ, ಪುರುಷೋತ್ತಮ್, ಅರುಣ ಕುಮಾರಿ, ವಿ.ಕುಸುಮ ಮತ್ತಿತರರಿದ್ದರು.



**ಹಾಸನ: ನಗರದ ಅಷ್ಟಾಂಗ ಯೋಗ ಕೇಂದ್ರದಲ್ಲಿ (ಆದಿಚುಂಚನಗಿರಿ ಮಹಿಳಾ ಸಮಾಜ) ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ನಾಲ್ವರು ಗಣ್ಯರಿಗೆ ಗೌರವ ಸಮರ್ಪಿಸಲಾಯಿತು. ಮಕ್ಕಳಾದ ತನಿಷ್ಕ, ಲೋಚನೆ, ಅಭಿ, ಆಗನ್ಯ ಮತ್ತು ನಿಸರ್ಗ ಯೋಗ ನೃತ್ಯ ಪ್ರದರ್ಶಿಸಿದರು. ಪಾಂಡು ಅವರು ಯೋಗ ಪ್ರದರ್ಶಿಸಿದರು. ಯೋಗ ಶಿಕ್ಷಕಿ ಕುಮುದ ಅಣ್ಣಯ್ಯ ಮತ್ತಿತರರಿದ್ದರು.**

## ಬ್ರಿಟನ್ ಪ್ರಧಾನಿ ಕಿರಿಯ ಸ್ಟಾರ್ಮರ್ ರಾಜೀನಾಮೆ ಸಾಧ್ಯತೆ

• ಪ್ರಜೋದಯ ವರದಿ

**ಲಂಡನ್:** ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಇನ್ನು ಎರಡು ದಿನಗಳಲ್ಲಿ ತಾವು ರಾಜೀನಾಮೆ ನೀಡುವ ಕುರಿತು ಘೋಷಣೆ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಬಗ್ಗೆ ಲೇಬರ್ ಪಕ್ಷದ ಅಧಿಕೃತ ಮೂಲಗಳು ಖಚಿತ ಪಡಿಸಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಸೋಮವಾರದ ಹೊತ್ತಿಗೆ ರಾಜೀ ನಾಮೆ ನೀಡುವ ಕುರಿತು ಘೋಷಣೆ ಮಾಡಲಿದ್ದಾರೆ.

# ಎಸ್‌ಐಆರ್ ಪ್ರಕ್ರಿಯೆ ಗಂಭಿರವಾಗಿ ಪರಿಗಣಿಸಿ



• ಪ್ರಜೋದಯ ವರದಿ

**ಸಕಲೇಶಪುರ:** ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್ ಐಆರ್) ಪ್ರಕ್ರಿಯೆ ಯಲ್ಲಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವುದು ಅಗತ್ಯವಾಗಿದ್ದು, ಅರ್ಹ ಮತದಾರರ ಹೆಸರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕೆಂದು ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ಅವರು ಹೇಳಿದರು.

ತಾಲ್ಲೂಕಿನ ಬಾಳ್ಳುಪೇಟೆಯ ಕೆಂಚಮ್ಮ ಮಲ್ಲೇಗೌಡ ಕಲ್ಯಾಣ ಮಂಟಪದಲ್ಲಿ ಜಾತ್ಯತೀತ ಜನತಾದಳ (ಜೆಡಿಎಸ್) ವತಿಯಿಂದ ಆಯೋಜಿಸಿದ್ದ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಬಿಎಲ್‌ಎ-2 ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿ ಯಾವುದೇ ಚುನಾವಣೆಯ ಮೂಲ ಆಧಾರವಾಗಿದ್ದು, ಅದರ ನಿಖರತೆ ಕಾಪಾಡುವುದು ಬೂತ್ ಮಟ್ಟದ ಕಾರ್ಯಕರ್ತನ ಜವಾಬ್ದಾರಿ ಎಂದು ತಿಳಿಸಿದರು.

ಬೂತ್ ಮಟ್ಟದ ಪ್ರತಿನಿಧಿಗಳು ತಮ್ಮ ವ್ಯಾಪ್ತಿಯ ಪ್ರತಿಯೊಂದು ಮನೆಗೂ ಭೇಟಿ ನೀಡಿ ಮತದಾರರ ಮಾಹಿತಿ ಪರಿಶೀಲಿಸಬೇಕು. ಹೊಸದಾಗಿ ಮತದಾನದ ಅರ್ಹತೆ ಪಡೆದ ಯುವಕರ ಹೆಸರು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸುವುದು, ಸ್ಥಳಾಂತರಗೊಂಡಿರುವ ಅಥವಾ ತಿದ್ದುಪಡಿ ಅಗತ್ಯವಿರುವ ಮತದಾರರ ವಿವರಗಳನ್ನು ಸರಿಪಡಿಸುವ ಕಾರ್ಯವನ್ನು ನಿರ್ವಹಿಸಬೇಕೆಂದು ಹೇಳಿದರು.

ಮತದಾರರ ಪಟ್ಟಿಯಲ್ಲಿ ಕಂಡು ಬರುವ ಲೋಪದೋಷಗಳನ್ನು ಸರಿಪಡಿಸಲು ಬಿಎಲ್‌ಎ-2 ಕಾರ್ಯಕರ್ತರು ಚುನಾವಣಾ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಮತದಾರರ ಪಟ್ಟಿಯ ನಿಖರತೆ ಕಾಪಾಡುವಲ್ಲಿ ಕಾರ್ಯಕರ್ತರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಪಕ್ಷದ ಸಂಘಟನೆಯ ಬಲವರ್ಧನೆಗೂ ಇದು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿ ದೇವರಾಜ್ ಅವರು, ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ, ಬಿಎಲ್‌ಎ-2 ಕಾರ್ಯಕರ್ತರ ಜವಾಬ್ದಾರಿ ಹಾಗು ಮತದಾರರ ಪಟ್ಟಿಯ ಪರಿಶೀಲನೆ ಕುರಿತಂತೆ ಮಾಹಿತಿ ನೀಡಿದರು.

ಜೆಡಿಎಸ್‌ನ ಸಕಲೇಶಪುರ ಬಿಎಲ್‌ಎ-1 ಕಾಡಪ್ಪ, ತಾಲ್ಲೂಕು ಅಧ್ಯಕ್ಷ ದೊಡ್ಡದೀಣೆ ಸ್ವಾಮಿಗೌಡ, ಆಲೂರು ತಾಲ್ಲೂಕು ಅಧ್ಯಕ್ಷ ಕೆ.ಎಸ್. ಮಂಜೇಗೌಡ, ಹಾಸನ ತಾಲ್ಲೂಕು ಅಧ್ಯಕ್ಷ ಎಸ್.ದೇವೇಗೌಡ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬೆಕ್ಕನಹಳ್ಳಿ ನಾಗರಾಜು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಚಂಚಲ ಕುಮಾರಸ್ವಾಮಿ ಮೊದಲಾದವರಿದ್ದರು.

# ದೈಹಿಕ-ಮಾನಸಿಕ ಆರೋಗ್ಯಕ್ಕೆ ಯೋಗ ಸಹಕಾರಿ



• ಪ್ರಜೋದಯ ವರದಿ

**ಆಲೂರು:** ಯೋಗ ಮನಸ್ಸನ್ನು ಶಾಂತವಾಗಿಡುವ ಮೂಲಕ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಸಹಕಾರಿಯಾಗುತ್ತದೆಂದು ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯ ದರ್ಶಿ ಎಂ.ಸ್ನೇಹ ಅವರು ಹೇಳಿದರು.

ತಾಲ್ಲೂಕಿನ ಬಿಕ್ಕೋಡು ರಸ್ತೆಯಲ್ಲಿರುವ ಜೆಎಂಎಫ್‌ಸಿ ನ್ಯಾಯಾಲಯ ಆವರಣದಲ್ಲಿ ಅಂತಾ ರಾಷ್ಟ್ರೀಯ ಯೋಗ ದಿನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಏಕಾಗ್ರತೆ ಹೆಚ್ಚಿಸಲು, ಮನಸ್ಸಿನ ನಿಯಂತ್ರಣ ಸಾಧಿಸಲು ಯೋಗ ಸಹಾಯ ಮಾಡುತ್ತದೆ. ಒತ್ತಡ ನಿವಾರಣೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಹಾಗೆಯೇ ಮನಸ್ಸಿಗೆ ಬೇಜಾರಾದಾಗ ಸ್ವಲ್ಪ ಹೊತ್ತು ಯೋಗ ಮಾಡಿದರೆ ಎಷ್ಟೋ ಆರಾಮವೆನಿಸುತ್ತದೆ ಎಂದರು.

ಯೋಗಾಭ್ಯಾಸವು ದೇಹವನ್ನು ಎಚ್ಚರಗೊಳಿಸಲು, ಮನಸ್ಸನ್ನು ಶಾಂತಗೊಳಿಸಲು, ಸ್ಪಷ್ಟತೆ ಮತ್ತು ಸಮತೋಲನದಿಂದ ದಿನವನ್ನು ಎದುರಿಸಲು ಸಿದ್ಧಪಡಿಸುತ್ತದೆ. ದಿನಪೂರ್ತಿ ಚಟು ವಟಿಕೆ, ಉತ್ಸಾಹದಿಂದಿರಲು ಯೋಗ ಸಹಕಾರಿ. ಯೋಗವು ಮಾನಸಿಕ ಯೋಗಕ್ಷೇಮವನ್ನು ಸುಧಾರಿಸಲು ಪ್ರಬಲ ಸಾಧನವಾಗಿದೆ. ನಿತ್ಯ ಜೀವನದಲ್ಲಿ ಯೋಗ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ಸದೃಢ ಆರೋಗ್ಯ ಹೊಂದಬೇಕೆಂದು ಕಿವಿ ಮಾತು ಹೇಳಿದರು.

ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎಂ.ಎಸ್.ಮಹೇಶ್, ವಕೀಲರಾದ ಮಂಜೇಗೌಡ, ನ್ಯಾಯಾಂಗ ಇಲಾಖೆ ನೌಕರರು ಹಾಜರಿದ್ದರು.


# ಪ್ರವಾಸಿಗರೊಂದಿಗೆ ಸಂಯಮದಿಂದ ವರ್ತಿಸಲು ಸಲಹೆ

• ಪ್ರಜೋದಯ ವರದಿ

**ಹಳೇಬೀಡು:** ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಪ್ರವಾಸಿಗ ರೊಂದಿಗೆ ಸಂಘರ್ಷ ಮಾಡಿಕೊಳ್ಳದೆ ಸಂಯಮದಿಂದ ವರ್ತಿಸಬೇಕೆಂದು ಪಿಡಿಒ ವಿರೂಪಾಕ್ಷ ಅವರು ಹೇಳಿದರು.

ಯೋಗ ದಿನಾಚರಣೆ ಅಂಗವಾಗಿ ಪುಷ್ಪಗಿರಿ ಬೀದಿ ಬದಿ ವ್ಯಾಪಾರಿಗಳ ಸಂಘದಿಂದ ಆಯೋಜಿಸಿದ್ದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಎಂ.ಎಸ್.ಸುರೇಶ್ ಮಾತನಾಡಿ, ಆರೋಗ್ಯಕ್ಕಾಗಿಯೋಗದ ಜೊತೆ ಸ್ವಚ್ಛತೆ ಇರಬೇಕೆಂದು ಸ್ವಚ್ಛತಾ ಕಾರ್ಯ



ಕ್ರಮ ಕೈಗೊಂಡಿದ್ದೇವೆ. ಸ್ವಚ್ಛತಾ ಕಾರ್ಯಕ್ರಮವನ್ನು ಇಂದಿಗೆ ಮಾತ್ರ ಸಿಮೀತಗೊಳಿಸದೆ ವಿಶೇಷ ಸಂದರ್ಭಗಳಲ್ಲಿ ನಿರಂತರವಾಗಿ ಮುಂದುವರೆಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ನವೀನ್, ಪದಾಧಿಕಾರಿ ಗಳಾದ ಅಡುಗೆ ರಾಜು, ವಾಸುದೇವ, ಬೂದಿಗುಂಡಿ ಮಂಜುನಾಥ, ಮುತ್ತುರಾಜ್, ಶೀಲಾ, ಗಾಯತ್ರಿ, ರವಿ, ಗಿರೀಶ್ ಪಾಲ್ಗೊಂಡಿದ್ದರು.

## ಎಲೈಟ್ ಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆ



• ಪ್ರಜೋದಯ ವರದಿ

**ಹಾಸನ:** ಯೋಗ ಎಂಬುದು ಮೈ ಮನಸ್ಸನ್ನು ಒಗ್ಗೂಡಿಸುವ ಸಾಧನವಾಗಿದೆ. ಮನಸ್ಸನ್ನು ಏಕಾಗ್ರತಾ ಸ್ಥಿತಿಗೆ ತರುವುದೇ ಯೋಗ. ಯೋಗದಿಂದ ನಾವು ಮಾಡುವ ಕೆಲಸದಲ್ಲಿ ಕೌಶಲ್ಯವನ್ನು ರೂಢಿಸಿಕೊಳ್ಳಬಹು ದೆಂದು ಲೇಖಕ ಗೊರೂರು ಶಿವೇಶ್ ಅವರು ತಿಳಿಸಿದರು.

ನಗರದ ಹೇಮಾವತಿ ನಗರದಲ್ಲಿರುವ ಎಲೈಟ್ ಶಾಲೆಯಲ್ಲಿ ಆಯೋಜಿಸಲಾಗಿದ್ದ 12ನೇ ಅಂತರರಾಷ್ಟ್ರೀಯ ಯೋಗಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ವೇಗವಾಗಿ ಮತ್ತು ನಿಖರವಾಗಿ ಹೆಚ್ಚು ಶ್ರಮವಿಲ್ಲದೆ, ಆಯಾಸವೆನಿಸದೆ ಸಂತೋಷದಾಯಕವಾಗಿ ಮಾಡುವ ಕೌಶಲವನ್ನು ರೂಢಿಸಿಕೊಳ್ಳಲು ಯೋಗ ಸಹಕಾರಿ ಎಂದರು.

ಜಿಲ್ಲಾ ಯೋಗ ಶಿಕ್ಷಣ ತರಬೇತುದಾರರಾದ ನಿರಂಜನ್ ರಾಜ್ ಅವರು ಮಾತನಾಡಿ, ಮನುಷ್ಯನ ನರಗಳ, ಸ್ನಾಯುಗಳ, ಬುದ್ಧಿಶಕ್ತಿಯ, ಉಸಿರಾಟದ ಹೊಂದಾಣಿಕೆಯೇ ಯೋಗ. ಯೋಗ ಎಂಬುದು ದೇಹದ ಸರ್ವತೋಮುಖ ಬೆಳವಣಿಗೆಗೆ ಪೂರಕವೆಂದರು. ಶಾಲೆಯ ಆಡಳಿತಾಧಿಕಾರಿ ಕೆ.ಎಂ.ನಾಗರಾಜು, ಪ್ರಾಂಶುಪಾಲರಾದ ಶ್ರೀಮತಿ ಎಸ್.ಕ್ರಿಸ್ಟೀನಾ ಇತರರು ಉಪಸ್ಥಿತರಿದ್ದರು.

ಶಾಲೆಯ ಹಿಂದಿ ವಿಭಾಗದ ಹಿರಿಯ ಶಿಕ್ಷಕರು, ರಾಷ್ಟ್ರಮಟ್ಟದ ಯೋಗಾಪ್ರಶಸ್ತಿ ವಿಜೇತರಾದ ಎ. ಪಾಂಡು ಅವರ ಮಾರ್ಗದರ್ಶನದಲ್ಲಿ ಶಾಲೆಯ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಬಗೆಯ ಯೋಗಾಸನಗಳನ್ನು ಸಾಮೂಹಿಕವಾಗಿ ಮಾಡುವುದರ ಮೂಲಕ ಯೋಗಾ ದಿನಾಚರಣೆಯನ್ನು ವಿದ್ಯುಕ್ತವಾಗಿ ಆಚರಿಸಿದರು. ಶಾಲೆಯ ವಿದ್ಯಾರ್ಥಿನಿಯರು ಯೋಗ ಕುರಿತಾದ ಕವಿತೆಯನ್ನು ಹಾಡಿದರು. ಬೋಧಕ/ಬೋಧಕೇತರ ವರ್ಗ, ಪೋಷಕರು ಹಾಗು ವಿದ್ಯಾರ್ಥಿಗಳು ಹಾಜರಿದ್ದರು.

# ಅಗ್ನಿವೀರ್ ಆಗಿ ಆಯ್ಕೆಯಾದ ವೇಣುಕುಮಾರ್‌ಗೆ ಗ್ರಾಮಸ್ಥರಿಂದ ಸನ್ಮಾನ



• ಪ್ರಜೋದಯ ವರದಿ

**ಸಕಲೇಶಪುರ:** ಭಾರತೀಯ ಸೇನೆ ಯಲ್ಲಿ ಸೇವೆ ಸಲ್ಲಿಸಲು ಅಗ್ನಿವೀರ್ ಆಗಿ ಆಯ್ಕೆಯಾಗಿರುವ ತಾಲ್ಲೂಕಿನ ಸುಳ್ಳಕ್ಕಿ ಗ್ರಾಮದ ಕುಮಾರ್ ಅವರ ಪುತ್ರ ವೇಣುಕುಮಾರ್ ಅವರನ್ನು ಕುದರಂಗಿ ಗ್ರಾಮಸ್ಥರು ಆತ್ಮೀಯ ವಾಗಿ ಸನ್ಮಾನಿಸಿ ಬೀಳ್ಕೊಡುಗೆ ನೀಡಿದರು.

ಪತ್ರಕರ್ತ ಕೆ.ಪಿ.ಸಾಗರ್ ರಾಜು ಅವರು ಮಾತನಾಡಿ, ಭಾರತೀಯ ಸೇನೆಗೆ ಸೇರುವುದು ಕೇವಲ ಉದ್ಯೋಗವಲ್ಲ, ಅದು ದೇಶ ಸೇವೆಯ ಒಂದು ಮಹತ್ತರ ಅವಕಾಶವಾಗಿದೆ. ಅಗ್ನಿವೀರ್ ಆಗಿ ಆಯ್ಕೆಯಾಗಿರುವ ವೇಣುಕುಮಾರ್ ಅವರು ಇಡೀ ಗ್ರಾಮಕ್ಕೆ ಹೆಮ್ಮೆ ತಂದಿದ್ದಾರೆ. ಸೇನೆಯಲ್ಲಿ ಸೇವೆ ಸಲ್ಲಿಸುವ ಪ್ರತಿಯೊಬ್ಬ ಯುವಕನು ಶಿಸ್ತು, ಸಮಯಪ್ರಜ್ಞೆ, ದೇಶಪ್ರೇಮ ಮತ್ತು ಆತ್ಮಾಭಿಮಾನವನ್ನು ರೂಢಿಸಿಕೊಳ್ಳಬೇಕು. ಸೇನೆ ಯಲ್ಲಿ ಕಲಿಯುವ ಶಿಸ್ತು ಮತ್ತು ನಾಯಕತ್ವದ ಗುಣಗಳು ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಯಶಸ್ಸು ತಂದುಕೊಡು ತ್ತವೆಂದು ಹೇಳಿದರು.

ಯುವಕರು ತಮ್ಮ ಸೇವಾ ಅವಧಿಯ ಲ್ಲಿಯೂ ವಿದ್ಯಾಭ್ಯಾಸವನ್ನು ಮುಂದುವರಿಸುವತ್ತ ಗಮನ ಹರಿಸಬೇಕು. ಶಿಕ್ಷಣ ಮತ್ತು ಅನುಭವ ಎರಡನ್ನೂ ಹೊಂದಿದರೆ ಭವಿಷ್ಯದಲ್ಲಿ ಇನ್ನಷ್ಟು ಉತ್ತಮ ಅವಕಾಶಗಳು ಲಭಿಸುತ್ತವೆ. ವೇಣುಕುಮಾರ್ ಅವರು ಸೇನೆಯಲ್ಲಿ ಉತ್ತಮ ಸೇವೆ ಸಲ್ಲಿಸಿ, ತಮ್ಮ ಸಾಧನೆಯ ಮೂಲಕ ಇತರೆ ಯುವಕರಿಗೂ ಮಾದರಿಯಾಗಬೇಕೆಂದು ಶುಭ ಹಾರೈಸಿದರು.

ದೇಶ ಸೇವೆ ಎಂಬುದು ಅತ್ಯಂತ ಶ್ರೇಷ್ಠವಾದ ಕರ್ತವ್ಯ. ಗ್ರಾಮೀಣ ಭಾಗದ ಯುವಕರು ಸೇನೆಗೆ ಸೇರ್ಪಡೆಗೊಂಡು ದೇಶ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ. ವೇಣುಕುಮಾರ್ ಅವರ ಸಾಧನೆ ಇತರೆ ಯುವಕರಿಗೂ ಪ್ರೇರಣೆಯಾಗಿದ್ದು, ಅವರು ತಮ್ಮ ಸೇವಾ ಅವಧಿಯಲ್ಲಿ ಉತ್ತಮ ಸಾಧನೆ ಮಾಡಿ ಗ್ರಾಮ ಹಾಗೂ ತಾಲ್ಲೂಕಿಗೆ ಕೀರ್ತಿ ತರಲಿ ಎಂದು ತಿಳಿಸಿದರು.

ಗ್ರಾಮಸ್ಥರಾದ ಮಂಜಯ್ಯ, ಮಲ್ಲೇಶ್, ರಮೇಶ್, ಲೋಹಿತ್, ತೀರ್ಥರಾಜ್ ಹಾಗೂ ಚಂದ್ರಶೇಖರ್ ಉಪಸ್ಥಿತರಿದ್ದರು.

# ಸ್ವಚ್ಛ ಭಾರತ್ ಮಿಷನ್ ಜಾಗೃತಿ ಜಾಥಾ



• ಪ್ರಜೋದಯ ವರದಿ

**ಬೇಲೂರು:** ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕಸ ವಿಂಗಡಣೆ ಕಡ್ಡಾಯಗೊಳಿಸುವ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಪಟ್ಟಣದಲ್ಲಿ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಯಿತು.

ಪುರಸಭೆ ಅಧ್ಯಕ್ಷ ಅಕ್ರಂ ಶರೀಫ್ ಅವರು ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿ, ಸ್ವಚ್ಛ ಹಾಗೂ ಆರೋಗ್ಯಕರ ನಗರ ನಿರ್ಮಾಣ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ. ಮನೆ-ಮನೆಗಳಲ್ಲಿ ಕಸವನ್ನು ಹಸಿ ಮತ್ತು ಒಣ ಕಸವಾಗಿ ವಿಂಗಡಿಸಿ ಪುರಸಭೆಯ ವಾಹನಗಳಿಗೆ ನೀಡುವ ಮೂಲಕ ಸಹಕರಿಸಬೇಕೆಂದು ಮನವಿ ಮಾಡಿದರು.

ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ ಪರಿಸರ ಸ್ನೇಹಿ ಪರ್ಯಾಯ ವಸ್ತುಗಳನ್ನು ಬಳಸುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ಶಾಲಾ ಮಕ್ಕಳು ಹಾಗೂ ಯುವಜನರು ಸ್ವಚ್ಛತೆಯ ರಾಯಭಾರಿಗಳಾಗಿ ಕಾರ್ಯನಿರ್ವಹಿಸಿ ಸಮಾಜದಲ್ಲಿ ಜಾಗೃತಿ ಮೂಡಿಸ ಬೇಕೆಂದರು.

ಪುರಸಭೆ ಮುಖ್ಯಾಧಿಕಾರಿ ಬಸವರಾಜು ಟಾಕಪ್ಪ ಶಿಗ್ಗಾವಿ ಅವರು ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ದೇಶನದಂತೆ ಘನತ್ಯಾಜ್ಯ ನಿರ್ವಹಣಾ ನಿಯಮ-2016ರ ಅನ್ವಯ ಕಸ ವಿಂಗಡಣೆ ಪ್ರಕ್ರಿಯೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ಮನೆ ಹಾಗೂ ವಾಣಿಜ್ಯ ಮಳಿಗೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಹಸಿ ಕಸ, ಒಣ ಕಸ, ಸ್ಯಾನಿಟರಿ ಕಸ ಮತ್ತು ವಿಶೇಷ ಕಾಳಜಿಯ ಕಸ ಎಂದು ವಿಂಗಡಿಸಿ ಪೌರಕಾರ್ಮಿಕರಿಗೆ ನೀಡುವುದು ಕಡ್ಡಾಯವಾಗಿದೆ ಎಂದರು.

ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಲಾಗುತ್ತಿದ್ದು, ಅದರ ಭಾಗವಾಗಿ ಶಾಲಾ ಮಕ್ಕಳ ಸಹಭಾಗಿತ್ವದಲ್ಲಿ ಜಾಗೃತಿ ಜಾಥಾ ಆಯೋಜಿಸಲಾಗಿದೆ. ಸಾರ್ವಜನಿಕರು ಕಸ ವಿಂಗಡಣೆ ನಿಯಮಗಳನ್ನು ಪಾಲಿಸಿ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವ ಮೂಲಕ ಸ್ವಚ್ಛ ನಗರ ನಿರ್ಮಾಣಕ್ಕೆ ಕೈಜೋಡಿಸ ಬೇಕೆಂದು ಮನವಿ ಮಾಡಿದರು.

ಆರೋಗ್ಯಾಧಿಕಾರಿ ಲೋಹಿತ್, ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ಶಾಲಾ ಮಕ್ಕಳು ಭಾಗವಹಿಸಿದ್ದರು.

### ಪುರಸಭೆ ಸದಸ್ಯರ ಗೈರು ಹಾಜರಿಗೆ ಅಸಮಾಧಾನ

ಪುರಸಭೆಯ ಮಹತ್ವದ ಸ್ವಚ್ಛತಾ ಜಾಗೃತಿ ಕಾರ್ಯಕ್ರಮವಾಗಿದ್ದರೂ ಪುರಸಭೆಯ ಬಹುತೇಕ ಸದಸ್ಯರು ಭಾಗವಹಿಸದಿರುವುದು ಸಾರ್ವಜನಿಕರ ಅಸಮಾ ಧಾನಕ್ಕೆ ಕಾರಣವಾಯಿತು. ಸ್ವಚ್ಛತೆ ಹಾಗೂ ಕಸ ವಿಂಗಡಣೆ ಕುರಿತು ಜನರಲ್ಲಿ ಅರಿವು ಮೂಡಿ ಸುವ ಕಾರ್ಯಕ್ರಮಗಳಲ್ಲಿ ಜನ ಪ್ರತಿನಿಧಿಗಳು ಸಕ್ರಿಯವಾಗಿ ಪಾಲ್ಗೊಂಡು ಮಾದರಿಯಾಗಬೇಕೆಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿದರು.

## ಹೊರ್ಮುಜ್ ಜಲಸಂಧಿ ಮತ್ತೆ ಬಂದ್

• ಪ್ರಜೋದಯ ವರದಿ

**ಟೆಹರಾನ್:** ಹೊರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಸಂಚಾರಕ್ಕೆ ವಿಧಿಸಲಾಗಿರುವ ನಿಷೇಧ ಮುಂದುವರಿದಿದೆ ಎಂದು ಇರಾನ್ ಭಾನುವಾರ ತಿಳಿಸಿದೆ.

ಅಮೇರಿಕಾ ಮತ್ತು ಇರಾನ್ ನಡುವೆ ಶಾಂತಿ ಮಾತುಕತೆಗಾಗಿ 60 ದಿನಗಳ ಕದನ ವಿರಾಮಕ್ಕೆ ಒಪ್ಪಂದವಾಗಿದ್ದರೂ, ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳ ಸಂಚಾರಕ್ಕೆ ವಿಧಿಸಲಾ ಗಿರುವ ನಿಷೇಧ ಮುಂದುವರಿದಿದೆ ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ತಿಳಿಸಿದೆ.

ಇರಾನ್ ದೇಶದ ಫಾರ್ಸ್ ಸುದ್ದಿ ಸಂಸ್ಥೆಯು ಮಿಲಿಟರಿ ಮೂಲಗಳನ್ನು ಉಲ್ಲೇಖಿಸಿ ಭಾನುವಾರ ಈ ವರದಿ ಮಾಡಿದೆ. ಮುಂದಿನ ಆದೇಶದವರೆಗೆ ಯಾವುದೇ ವಾಣಿಜ್ಯ ಹಡಗುಗಳು, ತೈಲ ಟ್ಯಾಂಕರ್‌ಗಳು ಜಲಸಂಧಿಯ ಮೂಲಕ ಹಾದುಹೋಗಲು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ ಅನುಮತಿ ನೀಡಿಲ್ಲ ಎಂದು ಮೂಲಗಳು ತಿಳಿಸಿವೆ.

# ಜೀವನ ಶಾಂತಿ, ನೆಮ್ಮದಿಗಾಗಿ ಯೋಗ ಅಗತ್ಯ

• ಪ್ರಜೋದಯ ವರದಿ

**ಹಾಸನ:** ಪ್ರತಿಯೊಬ್ಬರು ಉತ್ತಮ ದೇಹಾರೋಗ್ಯದ ಜೊತೆಗೆ ಜೀವನದಲ್ಲಿ ಶಾಂತಿ, ನೆಮ್ಮದಿ ಹಾಗೂ ಮನೋಲ್ಲಾಸಗಳಿಗಾಗಿ ದಿನನಿತ್ಯ ಯೋಗದ ಅಭ್ಯಾಸ ಅತ್ಯಗತ್ಯ ಎಂದು ಹಿರಿಯ ಯೋಗ ತರಬೇತುದಾರ ವಿ.ಕೃಷ್ಣಪ್ಪ ಅವರು ತಿಳಿಸಿದರು.

ನಗರದ ಎಸ್.ಆರ್.ಎಸ್. ಪ್ರಜ್ಞಾ ವಿದ್ಯಾಶಾಲೆಯಲ್ಲಿ ಆಯೋಜಿಸಲಾಗಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಯೋಗ ಪದದ ಅರ್ಥವನ್ನು ವ್ಯಾಖ್ಯಾನಿಸಿ, ಅದರ ಮಹತ್ವ ಮತ್ತು ಅದರಿಂದ ದೇಹಕ್ಕಾಗುವ ಪ್ರಯೋಜನಗಳನ್ನು ಮಕ್ಕಳಿಗೆ ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಿಕೊಟ್ಟರು. ನಮ್ಮ ಶರೀರ ಹಾಗೂ ಮನಸ್ಸನ್ನು ಕೇಂದ್ರೀಕರಿಸಿ ಏಕಾಗ್ರ ತೆಯ ಕಡೆಗೆ ಒಯ್ಯುವಲ್ಲಿ ಯೋಗದ ಪಾತ್ರ ಮಹತ್ವದ್ದಾಗಿದೆ. ವಿದ್ಯಾರ್ಥಿಗಳೆಲ್ಲರೂ ಎಳೆಯ ವಯಸ್ಸಿನಿಂದಲೇ ಯೋಗವನ್ನು ರೂಢಿಸಿಕೊಂಡು ಉತ್ತಮ ಮನೋದೈಹಿಕ ವೃದ್ಧಿಯ ಮೂಲಕ ವಿದ್ಯಾರ್ಜನೆಯಲ್ಲಿ ಗಮ ನಾರ್ಹ ಸಾಧನೆ ಮಾಡಬೇಕೆಂದು ತಿಳಿಸಿಕೊಟ್ಟರು.





ಸಂಸ್ಥೆಯ ಕಾರ್ಯದರ್ಶಿಯಾದ ಎಂ. ನಟರಾಜ ಅವರು ಮಾತನಾಡಿ, ನಮ್ಮ ಎಲ್ಲಾ ಸಾಧನೆಗೆ ಉತ್ತಮ ಆರೋಗ್ಯವೇ ಪ್ರಮುಖ. ಉತ್ತಮ ಆರೋಗ್ಯಕ್ಕೆ ಯೋಗವು ಮೂಲ ಮಂತ್ರವಾಗಿದೆ. ಯೋಗ ವಿಶ್ವಕ್ಕೆ ಭಾರತದ ಅತ್ಯಮೂಲ್ಯ ಕೊಡುಗೆ. ಯೋಗವು ನಮ್ಮ ಉತ್ತಮ ಜೀವನ ಶೈಲಿ, ಸ್ಥಿತ ಪ್ರಜ್ಞೆ ಮತ್ತು ಸದೃಢ ಆರೋಗ್ಯವನ್ನು ಉತ್ತಮವಾಗಿಸುವ ವಿಶೇಷ ಕಲೆಯಾಗಿದೆ. ಇಂದಿನ ಯಾಂತ್ರಿಕ ಬದುಕಿನಲ್ಲಿ ಯೋಗ ನಮ್ಮ ಬದುಕಿನ ಭಾಗವಾಗಬೇಕೆಂದು ತಿಳಿಸಿದರು.

ಮಕ್ಕಳು ಯೋಗದ ಮಹತ್ವದ ಬಗ್ಗೆ ಪಿ.ಪಿ.ಟಿ., ಸಮೂಹ ಗಾಯನ, ಭಾಷಣಗಳು ಹಾಗೂ ಯೋಗಾಸನಗಳ ಪಿರಮಿಡ್‌ಗಳ ಪ್ರದರ್ಶನ ನೀಡಿ ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸಿದರು. ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಆಶಾ ನಟರಾಜ್, ಶಿಕ್ಷಕ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

## ಸ್ವಚ್ಛ ನಗರ ನಿರ್ಮಾಣಕ್ಕೆ ನಾಗರಿಕರ ಸಹಭಾಗಿತ್ವ ಅಗತ್ಯ : ಮಹೇಶ್ವರಪ್ಪ

# ಕಸ ವಿಂಗಡಣೆಗೆ ಶಾಲಾ ಮಕ್ಕಳಿಗೆ ಜಾಗೃತಿ

• ಪ್ರಜೋದಯ ವರದಿ

**ಸಕಲೇಶಪುರ:** ಸ್ವಚ್ಛ ಪರಿಸರ ನಿರ್ಮಾಣ ಹಾಗು ಘನ ತ್ಯಾಜ್ಯ ನಿರ್ವಹಣೆಯ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಪುರಸಭೆ ವತಿಯಿಂದ ನಗರದ ವಾಸವಿ ಶಾಲೆಯಲ್ಲಿ ಕಸ ವಿಂಗಡಣೆ ಕುರಿತ ವಿಶೇಷ ಜಾಗೃತಿ ಕಾರ್ಯಕ್ರಮ ನಡೆಯಿತು.

ಪುರಸಭೆಯ ಮುಖ್ಯಾಧಿಕಾರಿ ಮಹೇಶ್ವರಪ್ಪ, ತಾಂತ್ರಿಕ ಶಾಖೆಯ ಸಹಾಯಕ ರೇವಣ್ಣ ಹಾಗು ಪುರಸಭೆಯ ಸಿಬ್ಬಂದಿ ವರ್ಗ ಭಾಗವಹಿಸಿ ವಿದ್ಯಾರ್ಥಿಗಳಿಗೆ ಕಸ ವಿಂಗಡಣೆಯ ಮಹತ್ವದ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಕಸವನ್ನು ನಾಲ್ಕು ವಿಭಾಗಗಳಲ್ಲಿ ವಿಂಗಡಿಸುವ ವಿಧಾನ ವನ್ನು ವಿವರಿಸಲಾಯಿತು. ಹಸಿ ಕಸ-ಆಹಾರದ ಅವಶೇಷಗಳು, ತರಕಾರಿ ಸಿಪ್ಪೆಗಳು, ಹಣ್ಣುಗಳ ತ್ಯಾಜ್ಯಗಳು, ಒಣ ಕಸ-ಕಾಗದ, ಪ್ಲಾಸ್ಟಿಕ್, ಲೋಹ, ಗಾಜು ಹಾಗು ಮರುಬಳಕೆ ಮಾಡ ಬಹುದಾದ ವಸ್ತುಗಳು. ಅಪಾಯಕಾರಿ ಕಸ-ಬ್ಯಾಟರಿ, ಬಲ್ಬ್, ಔಷಧಿ ಅವಶೇಷಗಳು, ರಾಸಾಯನಿಕ ತ್ಯಾಜ್ಯ. ಸ್ಯಾನಿಟರಿ ಮತ್ತು ಇ-ತ್ಯಾಜ್ಯ-ಬಳಸಿದ ಮಾಸ್ಕ್, ಸ್ಯಾನಿಟರಿ ನ್ಯಾಪ್ಕಿನ್, ಮೊಬೈಲ್, ಚಾರ್ಜರ್, ಎಲೆಕ್ಟ್ರಾನಿಕ್



ಉಪಕರಣಗಳ ತ್ಯಾಜ್ಯದ ಬಗ್ಗೆ ತಿಳಿಸಲಾಯಿತು.

ಈ ವೇಳೆ ಪುರಸಭೆಯ ಮುಖ್ಯಾಧಿಕಾರಿ ಮಹೇಶ್ವರಪ್ಪ ಮಾತನಾಡಿ, ಸ್ವಚ್ಛ ನಗರ ನಿರ್ಮಾಣಕ್ಕೆ ನಾಗರಿಕರ ಸಹಭಾಗಿತ್ವ ಅತ್ಯಗತ್ಯ. ಕಸ ವಿಂಗಡಣೆ ಕೇವಲ ಪುರಸಭೆಯ ಜವಾಬ್ದಾರಿಯಲ್ಲ, ಪ್ರತಿಯೊಬ್ಬರ ಸಾಮಾಜಿಕ ಕರ್ತವ್ಯವಾಗಿದೆ. ಮಕ್ಕಳು ಸ್ವಚ್ಛತೆಯ ರಾಯಭಾರಿಗಳಾಗಿ ಕಾರ್ಯ ನಿರ್ವಹಿಸಿದರೆ ಮುಂದಿನ ಪೀಳಿಗೆಯಲ್ಲಿ ಉತ್ತಮ ಪರಿಸರ ಜಾಗೃತಿ ಮೂಡುತ್ತದೆಂದು ಹೇಳಿದರು.

ತಾಂತ್ರಿಕ ಶಾಖೆಯ ಸಹಾಯಕ ರೇವಣ್ಣ ಅವರು ಮಾತನಾಡಿ, ಸ್ವಚ್ಛ ಭಾರತ ನಿರ್ಮಾಣದ ಮೊದಲ ಹೆಜ್ಜೆ ಮನೆಯಿಂದಲೇ ಆರಂಭವಾಗಬೇಕು. ಕಸವನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಿ ನೀಡಿದರೆ ಪೌರ ಕಾರ್ಮಿಕರ ಕೆಲಸ ಸುಲಭವಾಗುವುದಲ್ಲದೆ, ಪರಿಸರ ಮಾಲಿನ್ಯವೂ ಕಡಿಮೆಯಾಗುತ್ತದೆ. ಮಕ್ಕಳು ಇಂದು ಕಲಿತ ಉತ್ತಮ ಅಭ್ಯಾಸಗಳನ್ನು ಮನೆಯವರಿಗೂ ತಿಳಿಸಿ ದರೆ ಸಮಾಜದಲ್ಲಿ ದೊಡ್ಡ ಬದಲಾವಣೆ ತರಬಹುದೆಂದು ಹೇಳಿದರು.

ಕಸ ವಿಂಗಡಣೆ ಮಾಡದಿದ್ದರೆ ಪೌರ ಕಾರ್ಮಿಕರು ಎದುರಿಸುವ ಸಮಸ್ಯೆಗಳು, ಆರೋಗ್ಯದ ಮೇಲಿನ ದುಷ್ಪರಿಣಾಮಗಳು ಹಾಗು ಪರಿಸರಕ್ಕೆ ಆಗುವ ಹಾನಿಯ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಲಾಯಿತು. ಕಸವನ್ನು ವಿಂಗಡಿಸದೆ ಎಲ್ಲವನ್ನೂ ಒಟ್ಟಿಗೆ ಹಾಕುವುದರಿಂದ ಮರುಬಳಕೆ ಸಾಧ್ಯವಾಗುವುದಿಲ್ಲ ಹಾಗು ತ್ಯಾಜ್ಯ ನಿರ್ವಹಣೆಗೆ ಹೆಚ್ಚಿನ ವೆಚ್ಚವಾಗುತ್ತದೆಂದು ತಿಳಿಸಲಾಯಿತು.

# ಚೈತನ್ಯಕ್ಕೆ ಯೋಗ ಮದ್ದು : ಮೋದಿ

• ಪ್ರಜೋದಯ ವರದಿ



**ಕೊಲ್ಕತ್ತಾ :** ಯೋಗವು ಕೇವಲ ದೇಹವನ್ನು ಸದೃಢಗಳಿಸುವ ಸಾಧನಾವಲ್ಲ. ಆರೋಗ್ಯಕರ ಮತ್ತು ಚೈತನ್ಯಭರಿತ ವೃದ್ಧಾಪ್ಯಕ್ಕೆ ದಾರಿಯಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರಮೋದಿ ವರ್ಣಿಸಿದ್ದಾರೆ.

ಅಂತರ್ರಾಷ್ಟ್ರೀಯ ಯೋಗ ದಿನವಾದ ಭಾನುವಾರ ಕೋಲ್ಕತ್ತಾದ ಐತಿಹಾಸಿಕ ರೆಡ್ ರೋಡ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 70ರ ವಯಸ್ಸಿನಲ್ಲಿ 50 ವರ್ಷ ವಯಸ್ಸಿಗಿಂತ ಹೆಚ್ಚು ಆರೋಗ್ಯವಂತಾಗಿರ ಬೇಕು. ಆದ್ದರಿಂದ ಯೋಗವನ್ನು ಒಂದು ದಿನಕ್ಕೆ ಸಿಮೀತಗೊಳಿಸಬೇಡಿ. ಜೀವನದ ಭಾಗವನ್ನಾಗಿ ಮಾಡಿಕೊಳ್ಳಿ ಎಂದು ದೇಶದ ಜನತೆಗೆ ಅವರು ಕರೆ ನೀಡಿ, ಆರೋಗ್ಯಕರ ವೃದ್ಧಾಪ್ಯಕ್ಕೆ ಯೋಗ ಎಂಬ ಈ ವರ್ಷದ ವಿಷಯವನ್ನು ಉಲ್ಲೇಖಿಸಿದರು. ವಯಸ್ಸು ಹೆಚ್ಚಾಗುವುದು ಸಹಜ ಪ್ರಕ್ರಿಯೆಯಾಗಿದ್ದರೂ ಆರೋಗ್ಯ ಮತ್ತು ಸಾಮರ್ಥ್ಯ ಕುಗ್ಗುವುದು ಅನಿವಾರ್ಯವಲ್ಲ ಎಂದರು.

ನಮ್ಮ ಗುರಿ 70ರ ವಯಸ್ಸಿನಲ್ಲಿ 50ರ ವಯಸ್ಸಿಗಿಂತ ಹೆಚ್ಚು ಜೀವನ ಶೈಲಿ ಖಾಯಿಲೆಗಳಿಗೆ ಪ್ರತಿರೋಧಕ ಶಕ್ತಿಯನ್ನು ಹೊಂದಿರುವುದಾಗಿರಬೇಕು. 40ರ ವಯಸ್ಸಿನಲ್ಲಿ 20ರ ವಯಸ್ಸಿಗಿಂತ ಹೆಚ್ಚು ಲವಲವಿಕೆ, 50ರ ವಯಸ್ಸಿನಲ್ಲಿ 30ರ ವಯಸ್ಸಿಗಿಂತ ಹೆಚ್ಚು ಚೈತನ್ಯ ಹೊಂದಿರಬೇಕು. ಯೋಗವು ಈ ಗುರಿಗಳನ್ನು ಸಾಧಿಸಲು ನೆರವಾಗುವ ಶಕ್ತಿಶಾಲಿ ಸಾಧನವಾಗಿದೆ ಎಂದು ಹೇಳಿದರು.

ಇತ್ತೀಚಿನ ವರ್ಷಗಳಲ್ಲಿ ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ಸಮಸ್ಯೆಗಳು, ಸ್ಥೂಲಕಾಯ ಹಾಗೂ ಒತ್ತಡದಿಂದ ಉಂಟಾಗುವ ಅನಾರೋಗ್ಯ ವೇಗವಾಗಿ ಹೆಚ್ಚಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಮೋದಿ ಇಂತಹ ಜೀವನಶೈಲಿ ಖಾಯಿಲೆಗಳಿಂದ ದೂರವಿರಲು ಯೋಗ ಅತ್ಯಂತ ಪರಿಣಾಮಕಾರಿ ಎಂದು ಹೇಳಿದರು.

ನಿಯಮಿತ ಯೋಗ ಅಭ್ಯಾಸದಿಂದ ದೇಹದ ಲವಲವಿಕೆ ಹೆಚ್ಚಿಸುವುದರ ಜೊತೆಗೆ ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸುತ್ತದೆ. ಯೋಗ ಕೇವಲ ದೈಹಿಕ ವ್ಯಾಯಮವಲ್ಲ. ಅದು ದೇಹ, ಮನಸ್ಸು ಮತ್ತು ಆತ್ಮದ ನಡುವೆ ಸಮತೋಲನ ಸಾಧಿಸುವ ಸಮಗ್ರ ಜೀವನ ಪದ್ಧತಿಯಾಗಿದೆ ಎಂದರು.

ಪ್ರತಿದಿನ ಕೆಲವು ನಿಮಿಷಗಳ ಯೋಗಾಭ್ಯಾಸ ಮಾಡುವುದರಿಂದ ವ್ಯಕ್ತಿಯಲ್ಲಿ ಆತ್ಮವಿಶ್ವಾಸ ಹೆಚ್ಚಿಸುವುದರ ಜೊತೆಗೆ ಒತ್ತಡ ಮತ್ತು ಆತಂಕ ಕಡಿಮೆ ಮಾಡಲು ಸಹಕಾರಿಯಾಗುತ್ತದೆ. ಯೋಗದಿಂದ ಆರೋಗ್ಯ ಮಾತ್ರ ನೀಡುವುದಿಲ್ಲ. ಅದು ಜೀವನವನ್ನು ನೋಡುವ ದೃಷ್ಟಿಕೋನವನ್ನು ಬದಲಾಯಿಸುತ್ತದೆ. ಹೀಗಾಗಿ ಯೋಗದ ಮೂಲಕ ನಾವು ದೈಹಿಕವಾಗಿ ಸದೃಢವಾಗುವುದರ ಜೊತೆಗೆ ಮಾನಸಿಕವಾಗಿ ಶಾಂತ ಮತ್ತು ಸಮತೋಲನ ವ್ಯಕ್ತಿಗಳಾಗಬಹುದೆಂದು ತಿಳಿಸಿದರು.

ಯೋಗ ದಿನವನ್ನು ಕೇವಲ ಒಂದು ದಿನ ಆಚರಣೆಗೆ ಸಿಮೀತ ಮಾಡಬಾರದು. ಪ್ರತಿಯೊಬ್ಬರು ಯೋಗವನ್ನು ತಮ್ಮ ದೈನಂದಿನ ಜೀವನದ ಭಾಗವಾಗಿಸಿಕೊಳ್ಳಬೇಕು. ಮಕ್ಕಳು, ಕುಟುಂಬದ ಸದಸ್ಯ ಮತ್ತು ಯುವ ಜನರಲ್ಲಿ ಯೋಗದ ಬಗ್ಗೆ ಆಸಕ್ತಿ ಮೂಡಿಸಿ, ಅದನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಕೋಲ್ಕತ್ತಾದ ಐಕಾನಿಕ್ ರೆಡ್ ರೋಡ್‌ನಿಂದ ಪ್ರಮುಖ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಯೋಗ ದಿನಾಚರಣೆ ಮುನ್ನೆಡೆಸಿದರೆ ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಕೇಂದ್ರದ ಹಲವು ಸಚಿವರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಸಚಿವರು ಯೋಗ ದಿನಾಚಾರಣೆ ಕಾರ್ಯ ಕ್ರಮದಲ್ಲಿ ಭಾಗಿಯಾಗಿದ್ದರು. ಜೊತೆಗೆ ಜಗತ್ತಿನ ವಿವಿಧ ದೇಶ ಭಾರತೀಯ ರಾಜತಾಂತ್ರಿಕ ಕಾರ್ಯಾ ಚರಣೆಗಳು ವಿವಿಧ ದೇಶಗಳಲ್ಲಿ ಸಾವಿರಾರು ಸ್ಥಳಗಳಲ್ಲಿ ಯೋಗ ದಿನಾಚರಣೆ ನಡೆಯಿತು.

## ವೀರಶೈವ-ಲಿಂಗಾಯತ ಸಮಾಜ ಒಂದಾಗಬೇಕು



• ಪ್ರಜೋದಯ ವರದಿ

**ಅರಕಲಗೂಡು:** ವೀರಶೈವ ಲಿಂಗಾಯತ ಸಮಾಜದ ಸಂಘಟನೆಗೆ ಎಲ್ಲರೂ ಒಗ್ಗೂಡಿ ಕೆಲಸ ಮಾಡ ಬೇಕೆಂದು ದೊಡ್ಡಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಪಟ್ಟಣದ ಬಸವೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮತ್ತು ತಾಲ್ಲೂಕು ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನ ಪಡೆಯಲು ವೀರಶೈವ ಲಿಂಗಾಯತ ಸಮುದಾಯ ಒಟ್ಟಾಗಿ ಹೋರಾಟ ನಡೆಸುವ ಅನಿವಾರ್ಯತೆ ಎದುರಾಗಿದೆ. ಜಿಲ್ಲೆಯಲ್ಲಿ ಒಬ್ಬ ಶಾಸಕರನ್ನು ಪಡೆಯಲು ನಮ್ಮಿಂದ ಸಾಧ್ಯವಾಗಿಲ್ಲ ಎಂಬುದು ಅದಕ್ಕೆ ನಿದರ್ಶನವಾಗಿದೆ. ಬಗರ್ ಹುಕುಂ ಸಾಗುವಳಿ ಜಮೀನು ಹಂಚಿಕೆಯಲ್ಲಿ ಅಧಿಕಾರಿಗಳ ಪಾತ್ರವಿದೆ. ಯಾರೋ ದೂರು ಕೊಟ್ಟಿದ್ದಾರೆ ಎನ್ನುವ ಕಾರಣ ಮುಂದಿಟ್ಟುಕೊಂಡು ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರನ್ನು ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದಿರುವುದು ಸರಿಯಲ್ಲ. ಜಿಲ್ಲೆಯ ಬಹುಸಂಖ್ಯಾತ ಸಮುದಾಯಕ್ಕೆ ರಕ್ಷಣೆ ಇಲ್ಲದಂತಾಗಿರುವುದು ಅತ್ಯಂತ ದುರದೃಷ್ಟಕರ ಸಂಗತಿಯಾಗಿದ್ದು ಮಹಾಸಭಾ ಒಕ್ಕೊರಲಿನಿಂದ ಖಂಡಿಸುತ್ತದೆಂದು ಹೇಳಿದರು.

ಮಹಾಸಭಾ ರಾಷ್ಟ್ರೀಯ ಮಹಿಳಾ ಘಟಕದ ಬಿ.ಕೆ.ಚಂದ್ರಕಲಾ ಅವರು ಮಾತನಾಡಿ, ಸಂಘಟನೆಗೆ ರಾಜಕೀಯ ಸೋಂಕು ತಟ್ಟದಂತೆ ನೋಡಿಕೊಳ್ಳಬೇಕು. ವೀರಶೈವ ಲಿಂಗಾಯತ ಮಹಾಸಭಾ ದೊಡ್ಡ ಸಂಘಟನೆಯಾಗಿದ್ದು, ಕಪ್ಪು ಚುಕ್ಕೆ ಬಾರದಂತೆ ನೋಡಿಕೊಳ್ಳಬೇಕಿದೆ ಎಂದು ಸಲಹೆ ನೀಡಿದರು.

ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಜಿಲ್ಲಾ ಉಪಾಧ್ಯಕ್ಷ ಎ.ಬಿ.ಗುರುಸಿದ್ದೇಶ್, ಸುರೇಶ್, ಬೋರೆಹಳ್ಳಿ ಸೋಮಶೇಖರ್, ಪುನೀತ್ ಪಟೇಲ್, ತಾಲ್ಲೂಕು ಅಧ್ಯಕ್ಷರಾದ ಕಟ್ಟಾಯ ಶಿವಕುಮಾರ್, ಶೇಖರ್ ಸಂಕೋಡನಹಳ್ಳಿ, ದಿನೇಶ್, ರಾಜಶೇಖರ್, ಎಸ್.ಎಂ.ಎಸ್. ಕುಮಾರ್, ಅಜ್ಜನಹಳ್ಳಿ ಚಂದ್ರಶೇಖರ್, ಅನಿಲ್ ಕುಮಾರ್, ಜಗದೀಶ್ ಮತ್ತಿತರರಿದ್ದರು.

## ಬೇಲೂರಿನಲ್ಲಿ ಯೋಗ ದಿನಾಚರಣೆ

» ಮೊದಲನೇ ಪುಟದಲ್ಲಿ

ವಲ್ಲಿ ಯೋಗ ಪ್ರಮುಖ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬರೂ ಯೋಗಾಭ್ಯಾಸಕ್ಕೆ ಸಮಯ ಮೀಸಲಿಡಬೇಕು. ಯೋಗದಿಂದ ರೋಗ ಮುಕ್ತರಾಗಿ ಮನುಷ್ಯರು ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗಬಹುದು. ಯೋಗವನ್ನು ಒಂದು ದಿನ ಮಾತ್ರ ಸೀಮಿತವಾಗದೆ ದಿನನಿತ್ಯ ಮಾಡುವ ಮೂಲಕ ನೆಮ್ಮದಿ ಬದುಕು ಕಟ್ಟಿಕೊಳ್ಳಬಹುದೆಂದರು.

ಸಾವಿರಾರು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಹುಟ್ಟಿದ ಯೋಗವನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲುತ್ತದೆ. ಇಂದು ವಿಶ್ವದ 176 ದೇಶಗಳಲ್ಲಿ ಯೋಗ ದಿನ ಆಚರಿಸಲಾಗುತ್ತಿದೆ. ಯೋಗ ಮಾಡುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆಂದರು.

ಸತ್ಯಕ್ಕಿಂತ ಸುಳ್ಳು ಬೇಗ ವ್ಯಾಪಿಸಿಕೊಳ್ಳುತ್ತದೆ. ಐತಿಹಾಸಿಕ ಚನ್ನಕೇಶವ ಸ್ವಾಮಿ ಆಶೀರ್ವಾದದಿಂದ ಶಾಸಕನಾಗಿ ಆಯ್ಕೆ ಆಗಿದ್ದೇನೆ. ವದಂತಿಗಳಿಗೆ ಕಿವಿಗೊಡದೆ ಯೋಗಾಭ್ಯಾಸದ ಮೂಲಕ ಮಾನಸಿಕ ಸ್ಥಿರತೆ ಕಾಪಾಡಿಕೊಂಡಿದ್ದೇನೆ. ಸಾರ್ವಜನಿಕ ಜೀವನದಲ್ಲಿರುವವರಿಗೆ ಇಂತಹ ತೊಂದರೆಗಳು ಸಾಕಷ್ಟು ಬರುತ್ತವೆ. ಅಂತಹ ಸಂದರ್ಭದಲ್ಲಿ ಖಿನ್ನತೆಗೆ ಒಳಗಾಗಬಾರದು. ನಕಾರಾತ್ಮಕ ಚಿಂತನೆಗಳಿಂದ ದೂರವಿರಲು ಯೋಗ ಸಹಾಯ ಮಾಡುತ್ತದೆಂದು ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದಿದೆ ಎನ್ನಲಾದ ಅಡ್ಡಮತದಾನ ಸುದ್ದಿಗೆ ಶಾಸಕರು ಸೂಚ್ಯವಾಗಿ ಪ್ರತಿಕ್ರಿಯಿಸಿದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸತೀಶ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಬಸವರಾಜ್ ಸಿಗ್ಗಾವಿ, ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ, ಪಿಐ ರೇವಣ್ಣ, ಡಾ|| ಆದ್ಯಾ ಬೀರಾದಾರ್, ನವೀನ್, ದೇವಸ್ಥಾನ ಇಒ ಯೋಗೀಶ್, ಡಾ|| ವಿಜಯ್, ಕೃಷಿ ಸಹಾಯಕ ನಿರ್ದೇಶಕ ಕಾಂತರಾಜು ಇತರರಿದ್ದರು.

## ಮೌಲ್ಯಾಧಾರಿತ ಶಿಕ್ಷಣ ನೀಡುವುದು ಸಂಸ್ಥೆಗಳ ಜವಾಬ್ದಾರಿ

• ಪ್ರಜೋದಯ ವರದಿ




**ಚನ್ನರಾಯಪಟ್ಟಣ:** ಗುಣಮಟ್ಟ ಮತ್ತು ಮೌಲ್ಯಾಧಾರಿತ ಶಿಕ್ಷಣ ನೀಡುವುದು ಶಿಕ್ಷಣ ಸಂಸ್ಥೆಗಳ ಪ್ರಮುಖ ಧ್ಯೇಯವಾಗಬೇಕು. ಹಣದ ಹಿಂದೆ ಹೋಗದ ಜನರ ವಿಶ್ವಾಸ ಗಳಿಸುವುದು ಮುಖ್ಯವಾಗುತ್ತದೆಂದು ಶಾಸಕ ಸಿ. ಎನ್.ಬಾಲಕೃಷ್ಣ ಅವರು ತಿಳಿಸಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಟೈಮ್ಸ್ ಪಿಯು ಕಾಲೇಜಿನ ವತಿಯಿಂದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸ್ವಾಗತ ಕಾರ್ಯಕ್ರಮ ಹಾಗು 2025-26ನೇ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣದ ಜೊತೆ ವಿದ್ಯಾರ್ಥಿಗಳಲ್ಲಿ ಉತ್ತಮವಾದ ನಡತೆಯನ್ನು ರೂಢಿಸುವುದೇ ಶಿಕ್ಷಣ ಸಂಸ್ಥೆಗಳ ಮುಖ್ಯ ಗುರಿ. ಮಕ್ಕಳಲ್ಲಿ ಉತ್ತಮ ಗುಣವನ್ನು ಬೆಳೆಸುವುದು, ಚಾಣಾಕ್ಷತನ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸುವುದು ಶಿಕ್ಷಣ ಸಂಸ್ಥೆಗಳ ಗುರಿಯಾಗಬೇಕು. ಪ್ರತಿಯೊಬ್ಬ ನಾಗರಿಕನಿಗೂ ವಿದ್ಯಾಭ್ಯಾಸದ ಅವಶ್ಯಕತೆ ಇದೆ. ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಪೈಪೋಟಿ ಇದೆ. ಎಂಬಿಬಿಎಸ್ ಮಾತ್ರವಲ್ಲದೇ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ರೇಡಿಯಾಲಜಿ, ಡಿ.ಫಾರ್ಮಾ, ಬಿ.ಪಾರ್ಮಾ ಸೇರಿ ಅನೇಕ ಕೋರ್ಸ್‌ಗಳಿದ್ದು, ಹೇರಳ ಉದ್ಯೋಗಾವಕಾಶ ಇದೆ. ತಮಗೆ ಸಿಕ್ಕ ಅವಕಾಶಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕೆಂದರು.

ನಿತ್ಯ ದಿನಪತ್ರಿಕೆ ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಅದರಿಂದ ಬರೆಯುವ, ಮಾತನಾಡುವ ಕೌಶಲ ವೃದ್ಧಿಯಾಗುತ್ತದೆ. ಕೇವಲ ಪಠ್ಯ ಪುಸ್ತಕಗಳಿಗೆ ಸೀಮಿತವಾದರೆ ಯಶಸ್ಸು ಕಾಣುವುದು ಕಷ್ಟ. ಸಾಧನೆಯ ಕನಸು ಕಾಣುವ ವಿದ್ಯಾರ್ಥಿಗಳು ಪಠ್ಯದ ಹೊರತಾದ ಜ್ಞಾನವನ್ನು ಸಂಪಾದಿಸಬೇಕೆಂದು ಸಲಹೆ ನೀಡಿದರು. ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಬಿ.ಕೆ. ಗಂಗಾಧರ್ ಮಾತನಾಡಿದರು. ದ್ವಿತೀಯ ಪಿಯು ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲ ಎ.ಸಿ. ಸುನೀಲ್ ಕುಮಾರ್, ಉಪಪ್ರಾಂಶುಪಾಲ ಹೆಚ್.ಎಂ.ಶ್ರೀಕಂಠ, ಆಡಳಿತಾಧಿಕಾರಿ ಕೆ.ವಿ.ಸಂಜಯ್ ಮತ್ತಿತರರಿದ್ದರು.

## ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕಾಂಗ ಸಭೆ

» ಮೊದಲನೇ ಪುಟದಿಂದ

ಸಚಿವ ಕೊಳ್ಳೇಗಾಲ ಮಹೇಶ್ ಅವರು ಈ ಸಮಿತಿಯಲ್ಲಿದ್ದಾರೆ ಎಂದರು.

ನಮ್ಮದು ರಾಷ್ಟ್ರೀಯ ಪಕ್ಷ. ನಾವು ಶಾಸಕರಾಗಿ ಗೆಲ್ಲಲು ಪಕ್ಷದ ಆಶೀರ್ವಾದವಿದೆ. ಕಾರ್ಯಕರ್ತರ ಪರಿ ಶ್ರಮವೂ ಇದೆ. ಅದರಿಂದ ಕಾರ್ಯಕರ್ತರಿಗೆ ಆಘಾತ, ನೋವಾಗಿದೆ. ಮತದಾರರು ಇವತ್ತು ನರೇಂದ್ರ ಮೋದಿ ಅವರನ್ನು ನೋಡಿಕೊಂಡು ಮತ ಕೊಟ್ಟಿದ್ದಾರೆ. ನಮ್ಮ ಯೋಗ್ಯತೆ ಒಂದು ಕಡೆ ಬದಿಗಿಡಿ. ಶಾಸಕರು ಯಾರೆಷ್ಟೇ ದೊಡ್ಡವರಾಗಿದ್ದರೂ ಗೌಪ್ಯ ಮತದಾನ ನಡೆದ ಕಾರಣ ನನ್ನನ್ನೂ ಸೇರಿ 63 ಶಾಸಕರನ್ನೂ ಅನುಮಾನ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದರು.

## ಟೆಸ್ಟ್‌ನಲ್ಲಿ ದಾಖಲೆ ಬರೆದ ಜೋ ರೂಟ್

• ಪ್ರಜೋದಯ ವರದಿ

**ಓವಲ್:** ನ್ಯೂಜಿಲೆಂಡ್ ವಿರುದ್ಧ ನಡೆಯುತ್ತಿರುವ ಟೆಸ್ಟ್ ಪಂದ್ಯದ 2ನೇ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಅವರು ವಿಶೇಷ ಮೈಲಿಗಲ್ಲು ತಲುಪಿದ್ದಾರೆ.

ಮೊದಲ ಪಂದ್ಯ ಗೆದ್ದಿರುವ ಇಂಗ್ಲೆಂಡ್ ತಂಡವು ಸರಣಿಯಲ್ಲಿ 2-0 ಮುನ್ನಡೆ ಸಾಧಿಸ ಬೇಕಾದರೆ, ಈ ಪಂದ್ಯವನ್ನು ಗೆಲ್ಲಬೇಕಿತ್ತು. ಆದರೆ, 462 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು ಕೇವಲ 209 ರನ್‌ಗಳಿಗೆ ಆಲ್‌ಔಟ್ ಆಗುವ ಮೂಲಕ 253 ರನ್‌ಗಳ ಬೃಹತ್ ಅಂತರದ ಸೋಲು ಅನುಭವಿಸಿದೆ.

462ರನ್ ಗುರಿ ಬೆನ್ನಟ್ಟಿದ ಇಂಗ್ಲೆಂಡ್‌ಗೆ ಆರಂಭ ಆಘಾತ ಎದುರಾಯಿತು. 13 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಬ್ಯಾಟಿಂಗ್ ಇಳಿದ ರೂಟ್ ಇದೇ ಪಂದ್ಯದ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ 14,000 ರನ್ ಕಲೆಹಾಕಿದ ಸಾಧನೆ ಮಾಡಿದರು. 77 ರನ್ ಗಳಿಸಿ ಔಟ್ ಆದರು.

ಇಂಗ್ಲೆಂಡ್ 2ನೇ ಇನಿಂಗ್ಸ್‌ನಲ್ಲಿ ಜೋ ರೂಟ್ 24 ರನ್ ಗಳಿಸುತ್ತಿದ್ದಂತೆ ಟೆಸ್ಟ್ ಕ್ರಿಕೆಟ್‌ನಲ್ಲಿ 14,000 ರನ್ ಕಲೆಹಾಕಿದ ದಾಖಲೆ ಮಾಡಿದರು. ಆ ಮೂಲಕ ವಿಶ್ವ ಕ್ರಿಕೆಟ್‌ನಲ್ಲಿ ಈ ದಾಖಲೆ ಮಾಡಿದ 2ನೇ ಆಟಗಾರರಾದರು.ಸಚಿನ್ ತೆಂಡೂಲ್ಕರ್ ಮಾತ್ರ ಈ ಮೈಲಿಗಲ್ಲು ತಲುಪಿದ್ದಾರೆ.

## ಯೋಗದಿಂದ ಮಾನಸಿಕ ಆರೋಗ್ಯ ವೃದ್ಧಿ: ಸಿಮೆಂಟ್ ಮಂಜು

• ಪ್ರಜೋದಯ ವರದಿ




**ಸಕಲೇಶಪುರ:** ಯೋಗಾಭ್ಯಾಸವು ದೈಹಿಕ ಹಾಗು ಮಾನಸಿಕ ಆರೋಗ್ಯವನ್ನು ವೃದ್ಧಿಸುವ ಅತ್ಯುತ್ತಮ ಸಾಧನವಾಗಿದ್ದು, ಪ್ರತಿಯೊಬ್ಬರೂ ನಿತ್ಯ ಜೀವನದಲ್ಲಿ ಯೋಗ ಮಾಡಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಲಯನ್ಸ್ ಸೇವಾ ಮಂದಿರದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗ ಚೇತನ ಟ್ರಸ್ಟ್ ಹಾಗು ಬಿಜೆಪಿ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ಯೋಗವು ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆಯಾಗಿದ್ದು, ದೇಹ, ಮನಸ್ಸು ಮತ್ತು ಆತ್ಮದ ಸಮ ತೋಲನ ಸಾಧಿಸಲು ಸಹಕಾರಿ ಯಾಗಿದೆ. ಇಂದಿನ ಒತ್ತಡದ ಜೀವನ ಶೈಲಿಯಲ್ಲಿ ಆರೋಗ್ಯ ಕಾಪಾಡಿ ಕೊಳ್ಳಲು ಯೋಗ ಅತ್ಯಗತ್ಯವಾಗಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಪ್ರಯತ್ನದ ಫಲವಾಗಿ ವಿಶ್ವಸಂಸ್ಥೆಯು ಜೂ.21 ಅನ್ನು ಅಂತಾರಾಷ್ಟ್ರೀಯ ಯೋಗ ದಿನವನ್ನಾಗಿ ಘೋಷಿಸಿದ್ದು, ಇಂದು ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಯೋಗಾಭ್ಯಾಸಕ್ಕೆ ವ್ಯಾಪಕ ಮಾನ್ಯತೆ ದೊರೆತಿದೆ. ಯೋಗವು ಕೇವಲ ವ್ಯಾಯಾಮವಲ್ಲ, ಉತ್ತಮ ಜೀವನ ಶೈಲಿಯನ್ನು ರೂಪಿಸುವ ಶಿಸ್ತು ಎಂದು ತಿಳಿಸಿದರು.

ನಿಯಮಿತ ಯೋಗಾಭ್ಯಾಸದಿಂದ ಅನೇಕ ಖಾಯಿಲೆಗಳನ್ನು ದೂರವಿಡಬಹುದು. ಯುವಕರು ಸೇರಿ ಎಲ್ಲಾ ವಯೋಮಾನದವರು ಯೋಗವನ್ನು ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕೆಂದು ಕರೆ ನೀಡಿದರು.

ಯೋಗ ಚೇತನ ಟ್ರಸ್ಟ್ ಅಧ್ಯಕ್ಷ ಲಕ್ಷ್ಮೀ ರಂಗನಾಥ್ ಅವರು ಮಾತನಾಡಿ, ಟ್ರಸ್ಟ್ ವತಿಯಿಂದ ನಗರದಲ್ಲಿ ಸಾರ್ವಜನಿಕರಿಗೆ ನಿರಂತರವಾಗಿ ಯೋಗ ತರಬೇತಿ ನೀಡಲಾಗುತ್ತಿದೆ. ಅನೇಕರು ಯೋಗಾಭ್ಯಾಸದ ಮೂಲಕ ತಮ್ಮ ಆರೋಗ್ಯ ಸುಧಾರಿಸಿಕೊಂಡಿದ್ದಾರೆ. ಯೋಗವನ್ನು ಎಲ್ಲರೂ ಅಭ್ಯಾಸ ಮಾಡಬಹುದಾಗಿದ್ದು, ಅದರ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ದೂರ ಮಾಡಿ ಕೊಳ್ಳಬೇಕೆಂದು ಹೇಳಿದರು.

ಬಿಜೆಪಿ ಮಂಡಲ ಅಧ್ಯಕ್ಷ ವಳಲಹಳ್ಳಿ ಅಶ್ವತ್ಥ್, ಅಗ್ನಿ ಸೋಮಶೇಖರ್, ಮುಖಂಡರಾದ ವಿನಯ್, ನವೀನ್ ಶೆಟ್ಟಿ, ಲೋಕೇಶ್, ಮದನ್, ಯೋಗ ಚೇತನ ಟ್ರಸ್ಟ್‌ನ ಸತ್ಯಣ್ಣ, ಬಸವರಾಜ್ ಇತರರಿದ್ದರು.

# ಕಾಂಗ್ರೆಸ್‌ನಿಂದ ಜನರ ತೆರಿಗೆ ಹಣ ಲೂಟಿ

## ವ್ಯವಸ್ಥೆ ಸರಿಪಡಿಸಲು ಅವಕಾಶ ಕೊಡಿ | ಕೇಂದ್ರ ಸಚಿವ ಹೆಚ್.ಡಿ.ಕೆ. ಮನವಿ

• ಪ್ರಜೋದಯ ವರದಿ

**ಬೆಂಗಳೂರು:** ಕಾಂಗ್ರೆಸ್ ದುರಾಡಳಿತದಿಂದ ಬೆಂಗಳೂರಿನ ಜನರು ನಲುಗಿ ಹೋಗುತ್ತಿದ್ದಾರೆ. ಯೋಜನೆಗಳ ಹೆಸರಿನಲ್ಲಿ ಜನರ ತೆರಿಗೆ ಹಣ ಲೂಟಿ ಮಾಡುವುದೇ ಸರ್ಕಾರದ ಉದ್ದೇಶವಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಆರೋಪಿಸಿದರು.

ಪುಲಿಕೇಶಿ ನಗರದಲ್ಲಿ ಮಾಜಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಅವರನ್ನು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಬೆಂಗಳೂರಿನ ಅಭಿವೃದ್ಧಿಗೆ ಏನನ್ನೂ ಮಾಡುತ್ತಿಲ್ಲ. ಬದಲಿಗೆ ಯೋಜನೆಗಳ ಹೆಸರಿನಲ್ಲಿ ಜನರ ತೆರಿಗೆ ಹಣವನ್ನು ಲೂಟಿ ಹೊಡೆಯುತ್ತಿದೆ. ಮಳೆ ಬಂದರೆ ರಸ್ತೆಗಳಲ್ಲಿ ಮೊಣಕಾಲುದ್ದ ನೀರು ನಿಲ್ಲುತ್ತಿದೆ. ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಸರ್ಕಾರದ ಬಳಿ ಹಣ ಇಲ್ಲವಂತೆ. ಆದರೆ



ದೋಚುವುದಕ್ಕೆ ಯೋಜನೆಗಳ ಮೇಲೆ ಯೋಜನೆಗಳನ್ನು ರೂಪಿಸಿ ಜನರನ್ನು ವಂಚಿಸುತ್ತಿದ್ದಾರೆಂದು ದೂರಿದರು.

ಈ ಸರ್ಕಾರದ ಯೋಗ್ಯತೆಗೆ ಸಮರ್ಪಕವಾಗಿ ಕಸ ವಿಲೇವಾರಿ ಮಾಡುವುದಕ್ಕೆ ಆಗುತ್ತಿಲ್ಲ. ಬೀದಿ ಬೀದಿಯಲ್ಲಿ ರಾಶಿಗಟ್ಟಲೆ ಕಸ ಬಿದ್ದಿದೆ. ಕೆಟ್ಟ ಮತ್ತು ದುರಾಡಳಿತದಿಂದ ಇಡೀ ದೇಶದಲ್ಲಿ ಕರ್ನಾಟಕಕ್ಕೆ ಅತ್ಯಂತ ಕೆಟ್ಟ ಹೆಸರು ಬಂದಿದೆ. ಬಡ ಜನರಿಗೆ ಒಳ್ಳೆಯದು ಮಾಡುವ ಉದ್ದೇಶ ಈ ಸರ್ಕಾರಕ್ಕೆ ಇಲ್ಲ. ಗ್ಯಾರಂಟಿಗಳನ್ನು ಕೊಟ್ಟ ಹಾಗೆ ಕೊಟ್ಟು ಇದೀಗ ಅದರಲ್ಲಿ ಮುಕ್ಕಾಲು ಪಾಲು ಜನರನ್ನು ಕಿತ್ತು ಹಾಕುವ ಸಂಚು ನಡೆಸಿದ್ದಾರೆ. ನಾನು ಮುಖ್ಯಮಂತ್ರಿ ಆಗಿದ್ದಾಗ ಬೀದಿ ಬದಿ ವ್ಯಾಪಾರಿಗಳಿಗೆ ಬಡ್ಡಿ ರಹಿತ ಸಾಲ ಎಂದು 10,000 ನೀಡುವ ಯೋಜನೆ ರೂಪಿಸಿದ್ದೆ. ನನ್ನ ಸರ್ಕಾರ ಹೋದ ಮೇಲೆ ಆ ಯೋಜನೆಯನ್ನು ಕೈಬಿಡ ಲಾಯಿತು. ಬಡ ವ್ಯಾಪಾರಿಗಳು ಎಷ್ಟೇ ಗೋಗರಿದರೂ ಆ ಯೋಜನೆ ಯನ್ನು ಪುನಃ ಜಾರಿಗೆ ತರಲಿಲ್ಲ. ಕೇಂದ್ರ ಸರ್ಕಾರ ಪಿಎಂ ಸ್ವನಿಧಿ ಎಂಬ ಯೋಜನೆಯ ಹೆಸರಿನಲ್ಲಿ ಇಂತಹದೇ ಉತ್ತಮ ಯೋಜನೆಯನ್ನು ಜಾರಿಗೆ ತಂದಿದೆ. ಆ ಮೂಲಕ ಬಡ ವ್ಯಾಪಾರಿಗಳಿಗೆ 50 ಸಾವಿರ ರೂ. ಸಾಲ ನೀಡುತ್ತಿದೆ ಎಂದು ಹೇಳಿದರು.

**ನನಗೊಂದು ಅವಕಾಶ ಕೊಡಿ**

ಇದೆಲ್ಲವನ್ನು ಸರಿ ಮಾಡುವ ಕೆಲಸ ಮಾಡುತ್ತೇನೆ. ಬಡವರಿಗೆ ನಿವೇಶನ ಕೊಟ್ಟು ಎಷ್ಟೋ ಕಾಲವಾಯಿತು. ರಸ್ತೆಗಳ ಗುಂಡಿಗಳನ್ನು ದಿನವೂ ಜನರು ನೋಡಿ ಕಷ್ಟಕಾರ್ಪಣ್ಯ ಅನುಭವಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಪಾಲಿಕೆ ಸದಸ್ಯರು ಇಲ್ಲವಾಗಿ ಎಷ್ಟೋ ವರ್ಷ ಆಯಿತು. ಕೊನೆ ಪಕ್ಷ ಪಾಲಿಕೆ ಸದಸ್ಯರಾದರು ಇದ್ದಿದ್ದರೆ ಅವರ ಮನೆಗೆ ಹೋಗಿ ಕಷ್ಟ ಹೇಳಿಕೊಳ್ಳುತ್ತಿದ್ದರು. ಗ್ರೇಟರ್ ಬೆಂಗಳೂರು ಮಾಡಿದ್ದಾರೆ. ಆದರೆ, ಚುನಾವಣೆ ನಡೆಸುವ ಧೈರ್ಯ ಈ ಸರ್ಕಾರಕ್ಕೆ ಇಲ್ಲ. ಏನಾದರೂ ಮಾಡಿ ಮುಂದಕ್ಕೆ ಹಾಕಿಸುವ ಹುನ್ನಾರ ಮಾಡುತ್ತಲೇ ಇದ್ದಾರೆ. ಹೀಗಾದರೆ ಬೆಂಗಳೂರಿನ ಪರಿಸ್ಥಿತಿ ಎಲ್ಲಿಗೆ ಬರುತ್ತದೆ ಎಂಬುದನ್ನು ಜನರು ಯೋಚಿಸಬೇಕೆಂದರು.

**ಅಖಂಡ ಮನೆಗೆ ವಾಪಾಸ್ಸಾಗಿದ್ದಾರೆ**

ಅಖಂಡ ಶ್ರೀನಿವಾಸ ಮೂರ್ತಿ ಅವರು ತಮ್ಮ ಸ್ವಂತ ಮನೆಗೆ ವಾಪಾಸ್ಸಾಗಿದ್ದಾರೆ. ಅವರನ್ನು ಹೃದಯಪೂರ್ವಕವಾಗಿ ಪಕ್ಷಕ್ಕೆ ಬರಮಾಡಿಕೊಂಡಿದ್ದೇನೆ. ಮುಂದಿನ ದಿನಗಳಲ್ಲಿ ಅವರು ಬೆಂಗಳೂರು ಸೇರಿ ರಾಜ್ಯದಲ್ಲಿ ಪಕ್ಷವನ್ನು ಬಲಿಷ್ಟಗೊಳಿಸುವ ಕೆಲಸ ಮಾಡುತ್ತಾರೆಂದರು.

ಅಖಂಡ ಶ್ರೀನಿವಾಸ ಮೂರ್ತಿ ಅವರನ್ನು ಕಾಂಗ್ರೆಸ್ ಪಕ್ಷ ಸರಿಯಾಗಿ ನಡೆಸಿಕೊಳ್ಳಲಿಲ್ಲ. ಏನೆಲ್ಲಾ ಕಹಿ ಘಟನೆಗಳು ನಡೆದವು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಈ ಬಹಿರಂಗ ಸಭೆಯಲ್ಲಿ ನಾನು ಚರ್ಚೆ ಮಾಡಲು ಬಯಸುವುದಿಲ್ಲ. ಅವರ ಮನೆಗೆ ಬೆಂಕಿ ಹಾಕಲಾಯಿತು. ಆದರೂ, ಅವರು ಎದೆಗುಂದದೆ ತನ್ನನ್ನು ನಂಬಿದ ಕಾರ್ಯಕರ್ತರ ಜೊತೆ ನಿಂತರು. ಕೆಲವರು ಪರಿಸ್ಥಿತಿಯ ದುರ್ಲಾಭ ಪಡೆಯಲು ಪ್ರಯತ್ನಿಸಿದರೆಂದು ಹೆಚ್.ಡಿ.ಕೆ. ಬೇಸರ ವ್ಯಕ್ತಪಡಿಸಿದರು.

## ಎಸ್‌ಐಆರ್ ಅರ್ಹರಿಗೆ ತೊಂದರೆ ಮಾಡದಿರಲಿ: ಹೆಚ್.ಎಂ.ರೇವಣ್ಣ

• ಪ್ರಜೋದಯ ವರದಿ



**ಅರಸೀಕೆರೆ:** ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಜಾಗೃತಿ ವಹಿಸಬೇಕೆಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಹೆಚ್.ಎಂ. ರೇವಣ್ಣ ಅವರು ಕರೆ ನೀಡಿದರು.

ನಗರದ ಆದರ್ಶ ಫಾರಂ ಹೌಸ್‌ನಲ್ಲಿ ಶನಿವಾರ ನಡೆದ ಅರಸೀಕೆರೆ ವಿಧಾನಸಭಾ ಕ್ಷೇತ್ರದ ಬಿಎಲ್‌ಎ-2 ಹಾಗು ಬೂತ್ ಮಟ್ಟದ ಸಮಿತಿ ರಚನೆ ಸಭೆಯಲ್ಲಿ ಮಾತನಾಡಿ, ದೇಶದಲ್ಲಿ ಇದುವರೆಗೆ ಒಂಬತ್ತು ಬಾರಿ ವಿಶೇಷ ಮತದಾರರ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆದಿದ್ದು, ಕರ್ನಾಟಕದಲ್ಲಿ ಕೊನೆಯದಾಗಿ 2002ರಲ್ಲಿ ಪ್ರಕ್ರಿಯೆ ಜಾರಿಗೊಂಡಿತ್ತು. ಇದೀಗ ಮತ್ತೆ ವಿಶೇಷ ಪರಿಷ್ಕರಣೆ ಆರಂಭವಾಗಲಿದ್ದು, ಜೂ. 30 ರಿಂದ ಜು. 29ರ ವರೆಗೆ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆಂದು ತಿಳಿಸಿದರು.

ಮತದಾರರು ಅಗತ್ಯ ದಾಖಲೆಗಳನ್ನು ಒದಗಿಸಬೇಕು. ನಕಲಿ, ಮೃತಪಟ್ಟ ಅಥವಾ ಸ್ಥಳಾಂತರಗೊಂಡ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕುವುದು ಹಾಗು 18 ವರ್ಷ ಪೂರ್ಣಗೊಳಿಸಿರುವ ಹೊಸ ಮತದಾರರನ್ನು ಸೇರ್ಪಡೆಗೊಳಿಸುವುದು ಪರಿಷ್ಕರಣೆಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ದೇಶಕ್ಕೆ ಮಾರಕವಾಗಿರುವ ಅಕ್ರಮ ವಲಸಿಗರನ್ನು ಗುರುತಿಸಿ ಪಟ್ಟಿಯಿಂದ ಹೊರಗಿಡುವುದು ಹಾಗು ಅರ್ಹ ನಾಗರಿಕರ ಹೆಸರು ಸೇರಿಸುವುದೂ ಈ ಪ್ರಕ್ರಿಯೆಯ ಭಾಗವಾಗಿದೆ. ಇತ್ತೀಚೆಗೆ ನಡೆದ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಲಕ್ಷಾಂತರ ಮತಗಳು ವ್ಯರ್ಥವಾಗಿದ್ದು, ಅದು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿದೆ. ಕರ್ನಾಟಕದಲ್ಲಿ ಇಂತಹ ಪರಿಸ್ಥಿತಿ ಉಂಟಾಗದಂತೆ ಎಚ್ಚರ ವಹಿಸಬೇಕಿದೆ ಎಂದು ಹೇಳಿದರು.

ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಮಾತನಾಡಿ, ಕೆಲವು ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಸಂದರ್ಭದಲ್ಲಿ ಲಕ್ಷಾಂತರ ಮತದಾರರು ಪಟ್ಟಿಯಿಂದ ಹೊರಗುಳಿದಿರುವ ಉದಾಹರಣೆಗಳಿವೆ ಎಂದು ಹೇಳಿದರು.

ಮತದಾರರ ಪಟ್ಟಿಯಲ್ಲಿನ ಲೋಪಗಳು ಹಾಗೂ ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ ಕುರಿತಾಗಿ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಆದ್ದರಿಂದ ನಡೆಯಲಿರುವ ಪರಿಷ್ಕರಣೆ ವೇಳೆ ಯಾವುದೇ ಅರ್ಹ ಮತದಾರರ ಹೆಸರು ಪಟ್ಟಿಯಿಂದ ಕೈಬಿಡದಂತೆ ಗಮನ ಹರಿಸಬೇಕು ಎಂದು ಹೇಳಿದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಿದರು. ಹಾಲಿ ಮತದಾರರ ಪಟ್ಟಿಯನ್ನು ಹೊಸ ಮಾಹಿತಿಯೊಂದಿಗೆ ಮ್ಯಾಪಿಂಗ್ ಮಾಡುವ ಮೂಲಕ ನಕಲಿ ಹೆಸರು ಪತ್ತೆ ಹಚ್ಚಿ ದೋಷಗಳನ್ನು ಸರಿಪಡಿಸಲು ಸಾಧ್ಯವಾಗುತ್ತದೆ ಎಂದು ವಿವರಿಸಿದರು.

ಪ್ರತಿಯೊಬ್ಬ ನಾಗರಿಕನ ಮತ ರಾಷ್ಟ್ರದ ಭವಿಷ್ಯವನ್ನು ನಿರ್ಧರಿಸುವ ಪ್ರಬಲ ಅಸ್ತ್ರವಾಗಿದೆ. ಮತದಾನವು ಪ್ರತಿಯೊಬ್ಬರ ಹಕ್ಕು ಹಾಗೂ ಜವಾಬ್ದಾರಿಯಾಗಿದ್ದು, ಯಾವುದೇ ಅರ್ಹ ನಾಗರಿಕ ಮತದಾನ ಹಕ್ಕಿನಿಂದ ವಂಚಿತರಾಗದಂತೆ ಎಲ್ಲರೂ ಜಾಗೃತಿ ವಹಿಸಬೇಕೆಂದರು.

ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್, ಬಿ.ವಿ.ಶಶಿಧರ್, ಅರುಣ್ ಕುಮಾರ್, ಬಿಳಿಚೌಡಯ್ಯ, ಕಾಟಿಕೆರೆ ಉಮೇಶ್, ಬಾಣಾವರ ಶ್ರೀನಿವಾಸ್, ಸುಬ್ರಹ್ಮಣ್ಯ ಬಾಬು, ವೆಂಕಟಮನಿ, ಬಾಲಮುರುಗನ್, ಮನೋಹರ್, ಗುತ್ತಿನಕೆರೆ ಶಿವಮೂರ್ತಿ, ರಂಗನಾಥ್, ಗೌಸ್ ಖಾನ್, ಹರೀಶ್ ಇತರರಿದ್ದರು.

## ಮೇಕೆದಾಟು ನ್ಯಾಯಮಂಡಳಿ ರಚನೆ ಪ್ರಸ್ತಾವ ಬೇಡ

• ಪ್ರಜೋದಯ ವರದಿ

**ಚೆನ್ನೈ:** ಕರ್ನಾಟಕದ ಮೇಕೆದಾಟು ಅಣೆಕಟ್ಟು ಯೋಜನೆಯ ಸಮಸ್ಯೆಯನ್ನು ಪರಿಹರಿಸಲು ನ್ಯಾಯ ಮಂಡಳಿ ರಚಿಸುವ ತಮಿಳುನಾಡು ವಿಧಾನ ಸಭೆಯ ನಿರ್ಣಯವನ್ನು ಪಿಎಂಕೆ ನಾಯಕ ಅನ್ಬುಮಣಿ ರಾಮದಾಸ್ ಭಾನುವಾರ ತೀವ್ರವಾಗಿ ವಿರೋಧಿಸಿದ್ದಾರೆ.

ಇಂತಹ ಕ್ರಮವು ತಮಿಳುನಾಡಿನ ಸ್ಥಾಪಿತ ಕಾನೂನು ಹಕ್ಕುಗಳೊಂದಿಗೆ ರಾಜಿ ಮಾಡಿ, ಕರ್ನಾಟಕಕ್ಕೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆಂದು ಅವರು ಆರೋಪಿಸಿದ್ದಾರೆ.

ನ್ಯಾಯಮಂಡಳಿ ರಚನೆ ಪ್ರಸ್ತಾವ ಅನಗತ್ಯ ಎಂದು ವಿಶ್ಲೇಷಿಸಿರುವ ಅನ್ಬುಮಣಿ ರಾಮದಾಸ್, ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು, ಸದನದ ನಿರ್ಣಯದಿಂದ ಹೊಸ ನ್ಯಾಯ ಮಂಡಳಿ ರಚನೆಯನ್ನು ತೆಗೆದುಹಾಕಬೇಕೆಂದು ಒತ್ತಾಯಿಸಿದ್ದಾರೆ.

ನ್ಯಾಯಮಂಡಳಿ ರಚಿಸುವ ತಮಿಳುನಾಡು ವಿಧಾನಸಭೆಯ ನಿರ್ಣಯವನ್ನು ರೈತ ಸಂಘಟನೆಗಳು ವಿರೋಧಿಸಿವೆ. ಮೇಕೆದಾಟು ವಿಷಯದಲ್ಲಿ ನ್ಯಾಯವು ಸ್ಪಷ್ಟವಾಗಿ ತಮಿಳುನಾಡಿನ ಪರ ಇರುವಾಗ, ನಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಬದಲು, ನ್ಯಾಯ ಮಂಡಳಿ ರಚನೆ ಮೂಲಕ ಕೇಂದ್ರದ ಮಧ್ಯಸ್ಥಿಕೆ ಕೋರುವುದು ರಾಜ್ಯದ ಹಿತಾಸಕ್ತಿಗಳನ್ನು ಒತ್ತೆ ಇಡುವುದಕ್ಕೆ ಸಮಾನವಾಗಿದೆ ಎಂದು ಹೇಳಿದ್ದಾರೆ.

## ಯೋಗ-ಧ್ಯಾನ ಇಡೀ ವಿಶ್ವವನ್ನೇ ಆವರಿಸಿದೆ



• ಪ್ರಜೋದಯ ವರದಿ

**ನುಗ್ಗೇಹಳ್ಳಿ:** ಯೋಗ ಮತ್ತು ಧ್ಯಾನಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕೇವಲ ಭಾರತಕ್ಕೆ ಸೀಮಿತವಾಗಿದ್ದ ಯೋಗ ಹಾಗು ಧ್ಯಾನ ವಿಶ್ವವನ್ನೇ ಆವರಿಸಿದೆ ಎಂದು ಪುರ ವರ್ಗ ಹಿರೇಮಠದ ಡಾ. ಮಹೇಶ್ವರ ಸ್ವಾಮೀಜಿ ತಿಳಿಸಿದರು.

ಹೋಬಳಿ ಕೇಂದ್ರದ ಯತಿರಾಜ ಯೋಗ ಮತ್ತು ಧ್ಯಾನ ಕೇಂದ್ರದ ವತಿಯಿಂದ ಬಸವೇಶ್ವರ ಸಮುದಾಯ ಭವನದಲ್ಲಿ ಆಯೋಜಿಸಿದ್ದ ವಿಶ್ವ ಯೋಗ ದಿನ ಉದ್ಘಾಟಿಸಿ ಮಾತನಾಡಿದ ಅವರು, ಸಾವಿರಾರು ವರ್ಷಗಳ ಹಿಂದೆ ಅಖಂಡ ದೇಶದಲ್ಲಿ ಋಷಿ-ಮುನಿಗಳು ತಪಸ್ಸುಗೈಯುವ ಮೂಲಕ ಯೋಗ ಮತ್ತು ಧ್ಯಾನಕ್ಕೆ ಮಹತ್ವ ನೀಡುತ್ತಿದ್ದರು. ಅವರ ಆರೋಗ್ಯ ಸುಧಾರಣೆಯ ಜೊತೆಗೆ ಆಯಸ್ಸು ಕೂಡ ಹೆಚ್ಚಾಗುತ್ತಿತ್ತು. ಕೇವಲ ಭಾರತಕ್ಕೆ ಸೀಮಿತವಾಗಿದ್ದ ಯೋಗವನ್ನು ಇಂದು ಇಡೀ ವಿಶ್ವಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಸಹಕಾರದೊಂದಿಗೆ ವಿಶ್ವಕ್ಕೆ ವ್ಯಾಪಿಸಿದೆ ಎಂದರು.

ಉತ್ತಮ ಆರೋಗ್ಯ ಪಡೆಯಲು ಪ್ರತಿದಿನ ಕನಿಷ್ಟ 1 ಗಂಟೆಯಾದರೂ ಯೋಗಾಭ್ಯಾಸ ಮಾಡಬೇಕು. ಪ್ರತಿಯೊಬ್ಬರೂ ಇವತ್ತಿನ ಪರಿಸ್ಥಿತಿಯಲ್ಲಿ ಆರೋಗ್ಯದ ಬಗ್ಗೆ ಚಿಂತಿಸುವ ಅವಶ್ಯಕತೆ ಇದೆ ಎಂದರು.

ನಾಗರಿಕ ವೇದಿಕೆ ಅಧ್ಯಕ್ಷ ತೋಟಿ ನಾಗರಾಜ್ ಅವರು ಮಾತನಾಡಿ, ಗ್ರಾಮದಲ್ಲಿ ಕಳೆದ 12 ವರ್ಷಗಳಿಂದ ಸಮಾನ ಮನಸ್ಕರ ತಂಡ ಯತಿರಾಜ ಯೋಗ ಮತ್ತು ಧ್ಯಾನ ಕೇಂದ್ರವನ್ನು ಪ್ರಾರಂಭಿಸುವ ಮೂಲಕ ಪ್ರತಿದಿನವೂ ಯೋಗ ಮಾಡಲಾಗುತ್ತಿದೆ. ಇದರಿಂದ ಸಕ್ಕರೆ ಕಾಯಿಲೆ, ಮಧುಮೇಹ ಸೇರಿ ಅನೇಕ ಖಾಯಿಲೆಗಳನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗಿದೆ. ಗ್ರಾಮದ ಪ್ರತಿಯೊಬ್ಬರು ಉತ್ತಮ ಆರೋಗ್ಯ ಪಡೆಯುವ ದೃಷ್ಟಿಯಿಂದ ಯೋಗ ಕೇಂದ್ರಕ್ಕೆ ಭೇಟಿ ಕೊಡುವ ಮೂಲಕ ಯೋಗಾಭ್ಯಾಸದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ವೀರಶೈವ ಸಮಾಜದ ಹೋಬಳಿ ಅಧ್ಯಕ್ಷ ಎನ್.ಎಸ್.ಗಿರೀಶ್ ಮಾತನಾಡಿದರು. ಯೋಗ ಕೇಂದ್ರದ ಸದಸ್ಯರಾದ ಬೆಟ್ಟಯ್ಯ, ಮಹಾದೇವಮ್ಮ, ಶಂಕರ್, ಎನ್.ಜೆ.ಸೋಮನಾಥ್, ಎನ್.ಎಸ್.ಲಕ್ಷ್ಮಣ್, ಎನ್.ಸಿ. ಮಹೇಶ್, ಮೆಡಿಕಲ್ ಸಂತೋಷ್, ರವಿಶಾಚಾರ್, ತ್ರಿಣೇಶ್, ಎನ್. ಆರ್. ತೇಜು ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019